ಸಂಪಾದಕರು :
ಎಂ.ಎಸ್. ವಿಕಾಸ್

ಶನಿವಾರ, ಜುಲೈ 29, 2023
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 76 RNI : 27369/75

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

50 1974 2023

janathavani@mac.com
www.janathavani.com
08192 254736 91642 99999

## ಅರ್ಧದಷ್ಟು ಜನರಿಂದ ಗೃಹಲಕ್ಷ್ಮಿ ಅರ್ಜಿ ನಗರ ಪ್ರದೇಶಗಳಲ್ಲೇ ನೋಂದಣಿ ಹಿಂದೆ

ದಾವಣಗೆರೆ, ಜು. 28 - ಜಿಲ್ಲೆಯಲ್ಲಿ ಗೃಹ ಲಕ್ಷ್ಮಿ ಯೋಜನೆಗೆ 4.24 ಲಕ್ಷ ಅರ್ಜಿ ದಾಖಲಿಸುವ ಗುರಿ ಇದ್ದು, ಇದುವರೆಗೂ 2.20 ಲಕ್ಷದಷ್ಟು ಅರ್ಜಿಗಳು ದಾಖಲಾಗಿವೆ. ಇದರೊಂದಿಗೆ ಯೋಜನೆಗೆ ಅರ್ಜಿ ದಾಖಲಿಸುವಲ್ಲಿ ಅರ್ಧದಷ್ಟು ದಾರಿ ಕ್ರಮಿಸಿದಂತಾಗಿದೆ. ಈ ಯೋಜನೆಯ ಫಲಾನುಭವಿಗಳ ಖಾತೆಗೆ ತಿಂಗಳಿಗೆ 2 ಸಾವಿರ ರೂ. ಜಮಾ ಮಾಡಲಾಗುವುದು.

**ದಾವಣಗೆರೆಯಲ್ಲಿ ನೋಂದಣಿ ಸುಗಮಕ್ಕಾಗಿ 27 ಹೊಸ ಕೇಂದ್ರ, 143 ಪ್ರಜಾಪ್ರತಿನಿಧಿಗಳ ನೇಮಕ**



ದಾವಣಗೆರೆ ತಾಲ್ಲೂಕಿನ ಆವರಗೊಳ್ಳ ಗ್ರಾಮದಲ್ಲಿ ಗ್ರಾಮ ಒನ್ ಕೇಂದ್ರಕ್ಕೆ ಶುಕ್ರವಾರ ಜಿಲ್ಲಾಧಿಕಾರಿ ಡಾ. ವೆಂಕಟೇಶ್ ಎಂ.ವಿ. ಭೇಟಿ ನೀಡಿ ಪರಿಶೀಲಿಸಿದರು.

ಆದರೆ, ದಾವಣಗೆರೆ ನಗರದಲ್ಲಿ ಜನಸಂಖ್ಯೆ ಹೆಚ್ಚಾಗಿದ್ದರೆ, ಅರ್ಜಿ ದಾಖಲಿಸಲು ಕೇಂದ್ರಗಳ ಕೊರತೆ ಇದೆ. ಈ ಹಿನ್ನೆಲೆಯಲ್ಲಿ ದಾವಣಗೆರೆ ದಕ್ಷಿಣದಲ್ಲಿ 20 ಹಾಗೂ ಉತ್ತರದಲ್ಲಿ 7 ದಾಖಲಾತಿ ಕೇಂದ್ರಗಳನ್ನು ತೆರೆಯಲು ಜಿಲ್ಲಾಡಳಿತ ನಿರ್ಧರಿಸಿದೆ.

ಗೃಹಲಕ್ಷ್ಮಿ ಯೋಜನೆಗಾಗಿ ಇದುವರೆಗೂ ಶೇ.80ರಷ್ಟು ನೋಂದಣಿ ಪೂರ್ಣಗೊಂಡಿರುವ ಗ್ರಾಮ ಒನ್ ಕೇಂದ್ರಗಳಿಂದ ಕಂಪ್ಯೂಟರ್ ಆಪರೇಟರ್‌ಗಳನ್ನು ಪಡೆದು, ದಾವಣಗೆರೆ ಉತ್ತರ ಹಾಗೂ ದಕ್ಷಿಣದ ಕೇಂದ್ರಗಳಿಗೆ ನಿಯೋಜಿಸಲು ನಿರ್ಧರಿಸಲಾಗಿದೆ.

ಇದೇ ವೇಳೆ ದಾವಣಗೆರೆ ತಾಲ್ಲೂಕಿಗೆ 143 ಜನಪ್ರತಿನಿಧಿಗಳನ್ನು ನೇಮಿಸಲಾಗಿದೆ. ಇವರು ಜನರ ಮನೆ ಬಾಗಿಲಿಗೆ ತೆರಳಿ ಉಚಿತವಾಗಿ ಅರ್ಜಿ ದಾಖಲಿಸಲು ನೆರವಾಗಲಿದ್ದಾರೆ. ಪ್ರಸಕ್ತ ದಾವಣಗೆರೆ ತಾಲ್ಲೂಕಿಗೆ ಮಾತ್ರ ಸೀಮಿತವಾಗಿ ಪ್ರಜಾಪ್ರತಿನಿಧಿಗಳ ನೇಮಕವಾಗಿದೆ.

ಬೇರೆ ತಾಲ್ಲೂಕುಗಳ ಪರಿಸ್ಥಿತಿ ಪರಿಶೀಲಿಸಿದ ನಂತರ ಪ್ರಜಾಪ್ರತಿನಿಧಿ ನೇಮಕ ಹಾಗೂ ಹೊಸ ಕೇಂದ್ರಗಳ ಸ್ಥಾಪನೆ ಕುರಿತು ನಿರ್ಧಾರ ತೆಗೆದುಕೊಳ್ಳಲಾಗುವುದು ಎಂದು ಅಧಿಕಾರಿಗಳು ಹೇಳಿದ್ದಾರೆ.

ಕಳೆದ ಜುಲೈ 19ರಿಂದ ಗೃಹಲಕ್ಷ್ಮಿ ಯೋಜನೆಗೆ ಅರ್ಜಿ ದಾಖಲಿಸುವ ಪ್ರಕ್ರಿಯೆ ಆರಂಭಿಸಲಾಗಿತ್ತು. ಮೊದಲು ಮೊಬೈಲ್‌ಗೆ ಮೆಸೇಜ್ ಬಂದವರು (3ನೇ ಪುಟಕ್ಕೆ)

**ಗ್ರಾಮಾಂತರ ಪ್ರದೇಶದಲ್ಲಿ ಗೃಹಲಕ್ಷ್ಮಿ ಯೋಜನೆಯ ನೋಂದಣಿ ಶೇ.75-80ರಷ್ಟು ಪೂರ್ಣಗೊಂಡಿದೆ. ಇಡೀ ಜಿಲ್ಲೆಯಲ್ಲಿ 4.50 ಲಕ್ಷದಷ್ಟು ನೋಂದಣಿಯಾಗಬೇಕಿದ್ದು, ಈ ಪ್ರಕ್ರಿಯೆಯನ್ನು ಆಗಸ್ಟ್ 5ರ ಒಳಗೆ ಪೂರ್ಣಗೊಳಿಸುವ ಗುರಿ ಇದೆ. ಈ ಯೋಜನೆಯನ್ನು ಸಮರೋಪಾದಿಯಲ್ಲಿ ಜಾರಿಗೆ ತರುವ ಸಲುವಾಗಿ ಜಿಲ್ಲೆಗೆ ಒಬ್ಬರಂತೆ ನೋಡಲ್ ಅಧಿಕಾರಿಯನ್ನು ನೇಮಿಸಲಾಗುವುದು.**

**- ಎಂ.ವಿ. ವೆಂಕಟೇಶ್, ಜಿಲ್ಲಾಧಿಕಾರಿ**

**ದಾವಣಗೆರೆ ನಗರದಲ್ಲಿ ಜನಸಂಖ್ಯೆ ಹೆಚ್ಚಾಗಿದ್ದರೆ, ನೋಂದಣಿ ಕೇಂದ್ರಗಳ ಸಂಖ್ಯೆ ಕಡಿಮೆ ಇತ್ತು. ಇದರಿಂದಾಗಿ ನಗರದಲ್ಲಿ ಗೃಹಲಕ್ಷ್ಮಿ ನೋಂದಣಿ ಕಡಿಮೆಯಾಗಿದೆ. ಈ ಹಿನ್ನೆಲೆಯಲ್ಲಿ 27 ಹೊಸ ನೋಂದಣಿ ಕೇಂದ್ರಗಳನ್ನು ಆರಂಭಿಸಲಾಗುತ್ತಿದೆ ಮತ್ತು 143 ಪ್ರಜಾಪ್ರತಿನಿಧಿಗಳ ನೇಮಕ ಮಾಡಲಾಗುತ್ತಿದೆ.**

**- ವಾಸಂತಿ ಉಪ್ಪಾರ್, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಉಪ ನಿರ್ದೇಶಕಿ**

# ಕರ್ನಾಟಕ ಶಿಕ್ಷಣ ನೀತಿ ಜಾರಿ

## ಎನ್‌ಇಪಿ ರದ್ಧತಿ ಕುರಿತು ಮುಂದಿನ ವಾರ ಸಂಪುಟದಲ್ಲಿ ತೀರ್ಮಾನ

ಬೆಂಗಳೂರು, ಜು. 28 - ಬಿಜೆಪಿ ಆಡಳಿತದಲ್ಲಿ ಜಾರಿಗೆ ತಂದಿದ್ದ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ರದ್ದುಪಡಿಸಿ ಕರ್ನಾಟಕ ಶಿಕ್ಷಣ ನೀತಿ ಜಾರಿಗೆ ತರಲು ರಾಜ್ಯ ಸರ್ಕಾರ ನಿರ್ಧರಿಸಿದೆ.

ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ ಹಾಗೂ ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣಪ್ರಕಾಶ್ ಪಾಟೀಲ್ ಅವರು ಹಿರಿಯ ಅಧಿಕಾರಿಗಳು ಹಾಗೂ ಕೆಲವು ಸಂಘಟನೆಗಳ ಪದಾಧಿಕಾರಿಗಳೊಂದಿಗೆ ಸುದೀರ್ಘ ಸಮಾಲೋಚನೆ ನಡೆಸಿದ ಬಳಿಕ ಈ ನಿರ್ಧಾರಕ್ಕೆ ಬಂದಿದ್ದಾರೆ.

ಶಿಕ್ಷಣ ಇಲಾಖೆ ತೆಗೆದುಕೊಂಡಿರುವ ನಿರ್ಧಾರವನ್ನು ಮುಂದಿನ ವಾರ ನಡೆಯುವ ಸಚಿವ ಸಂಪುಟ ಸಭೆಯಲ್ಲಿ ಚರ್ಚಿಸಿ ಕರ್ನಾಟಕ ಶಿಕ್ಷಣ ನೀತಿ ಜಾರಿಗೆ ತರಲು ಅಂದೇ ಸರ್ಕಾರ ತೀರ್ಮಾನ ಕೈಗೊಳ್ಳಲಿದೆ.

**ಸಂಪುಟದ ಒಪ್ಪಿಗೆ ಪಡೆದು ತಜ್ಞರ ಸಮಿತಿ ನೇಮಕ ಮಾಡಿ, ನೀತಿ ಹಾಗೂ ಹೊಸ ಪಠ್ಯದ ಬಗ್ಗೆ ವರದಿ ಪಡೆಯಲಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ**

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣದಲ್ಲಿ ಎನ್‌ಇಪಿ ಅನುಷ್ಠಾನಗೊಂಡಿರಲಿಲ್ಲ. ಆದರೆ, ಕೆಲವು ವಿಷಯಗಳ ಪಠ್ಯ ಮತ್ತು ಪದಗಳನ್ನು ಬದಲಿಸಿದ್ದರು.

ಹಿಂದಿನ ಬಿಜೆಪಿ ಸರ್ಕಾರ ತೆಗೆದುಕೊಂಡಿದ್ದ ಈ ತೀರ್ಮಾನವನ್ನು ಈಗಾಗಲೇ ರದ್ದುಪಡಿಸಿ, ಅದಕ್ಕೂ ಮುಂಚೆ ಇದ್ದ ಪಠ್ಯಕ್ರಮವನ್ನು ಜಾರಿಗೆ ತಂದಿದ್ದಾರೆ.

ವೈದ್ಯಕೀಯ ಶಿಕ್ಷಣದಲ್ಲಿ ಸದ್ಯಕ್ಕೆ ಯಾವುದೇ ಬದಲಾವಣೆ ಇಲ್ಲ. ಉನ್ನತ ಶಿಕ್ಷಣದಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿ ಅಳವಡಿಸಲಾಗಿತ್ತು. ಈ ನೀತಿಯನ್ನು ಕಾಂಗ್ರೆಸ್ ಮೊದಲಿನಿಂದಲೂ ವಿರೋಧಿಸಿದ್ದಲ್ಲದೆ, ವಿಧಾನಸಭಾ ಚುನಾವಣೆ ಸಂದರ್ಭದಲ್ಲೂ ಪಕ್ಷ ಅಧಿಕಾರಕ್ಕೆ ಬಂದರೆ ರಾಷ್ಟ್ರೀಯ ಶಿಕ್ಷಣ ನೀತಿ ರದ್ದುಪಡಿಸಿ ಕರ್ನಾಟಕ ಶಿಕ್ಷಣ ನೀತಿ ಜಾರಿಗೆ ತರುವ ಭರವಸೆ ನೀಡಿತ್ತು.

ಹಣಕಾಸು ಇಲಾಖೆ ಹೊಣೆ ಹೊತ್ತಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಮ್ಮ ನೂತನ ಸರ್ಕಾರದ ಮೊದಲ ಬಜೆಟ್‌ನಲ್ಲಿ ಎನ್‌ಇಪಿ ರದ್ದುಮಾಡುವ ವಿಚಾರ ಪ್ರಸ್ತಾಪಿಸಿದ್ದರು.

ಇದಕ್ಕೆ ಪೂರಕವಾಗಿ ಸಂಬಂಧಪಟ್ಟ ಇಲಾಖೆ ಸಚಿವರು, ಅಧಿಕಾರಿಗಳು ಇಂದು (5ನೇ ಪುಟಕ್ಕೆ)

## ಪಂಚ ಗ್ಯಾರಂಟಿಗಳು ಅಕ್ರಮ-ದೂರು ಸಿಎಂಗೆ ಹೈಕೋರ್ಟ್ ನೋಟಿಸ್



ಬೆಂಗಳೂರು, ಜು. 28 - ಪಂಚ ಗ್ಯಾರಂಟಿಗಳು ಚುನಾವಣಾ ಅಕ್ರಮ ಎಂದು ದಾಖಲಾಗಿರುವ ದೂರಿನ ಹಿನ್ನೆಲೆಯಲ್ಲಿ ರಾಜ್ಯ ಹೈಕೋರ್ಟ್ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ನೋಟಿಸ್ ಕಳಿಸಿದೆ.

ಸೆಪ್ಟೆಂಬರ್ 1ರ ಒಳಗೆ ಉತ್ತರ ನೀಡುವಂತೆ ತಿಳಿಸಿರುವ ನ್ಯಾಯಮೂರ್ತಿ ಸುನೀಲ್ ದತ್ತ ಯಾದವ್ ಅವರು, ವಿಚಾರಣೆಯನ್ನು ಮುಂದೂಡಿದ್ದಾರೆ.

ಕಾಂಗ್ರೆಸ್ ಪಕ್ಷದ ಚುನಾವಣಾ ಪ್ರಣಾಳಿಕೆಯಲ್ಲಿ ಭರವಸೆ ನೀಡಲಾದ ಐದು ಗ್ಯಾರಂಟಿಗಳು ಚುನಾವಣಾ ಅಕ್ರಮಗಳಾಗಿವೆ. ಇವು ಮತದಾರರಿಗೆ ಲಂಚ ನೀಡಿದಂತೆ ಹಾಗೂ ಜನಪ್ರತಿನಿಧಿ ಕಾಯ್ದೆಯ ಉಲ್ಲಂಘನೆ ಎಂದು ಹೈಕೋರ್ಟ್‌ನಲ್ಲಿ ಅರ್ಜಿ ದಾಖಲಿಸಲಾಗಿತ್ತು. ಸಿದ್ದರಾಮಯ್ಯ ಅವರು ಗ್ಯಾರಂಟಿಗಳ (3ನೇ ಪುಟಕ್ಕೆ)

## ಬಿಜೆಪಿ ಆಡಳಿತದ ಗುಂಗಿನಿಂದ ಅಧಿಕಾರಿಗಳು ಇನ್ನೂ ಹೊರಬಂದಿಲ್ಲ



ಬೆಂಗಳೂರು, ಜು. 28 - ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಖಾತೆ ಸಚಿವ ಪ್ರಿಯಾಂಕ್ ಖರ್ಗೆ ಅವರ ಆಪ್ತ ಕಾರ್ಯದರ್ಶಿಯಾಗಿ ತಮ್ಮನ್ನು ನೇಮಿಸುವಂತೆ ಆಡಳಿತ ಪಕ್ಷದ ಶಾಸಕರೊಬ್ಬರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಮಾಡಿದ್ದಾರೆ.

ಖಾಸಗಿ ಹೋಟೆಲ್ ನಲ್ಲಿ ನಿನ್ನೆ ರಾತ್ರಿ ನಡೆದ ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆ ಆರಂಭಕ್ಕೂ ಮುನ್ನ ಚನ್ನಗಿರಿ ಶಾಸಕ ಶಿವಗಂಗಾ ಅವರು ಮುಖ್ಯಮಂತ್ರಿ ಭೇಟಿಯಾಗಿ ಈ ರೀತಿ ಪತ್ರ ನೀಡಿದ್ದಾರೆ.

ಶಾಸಕರಾಗಿದ್ದರೂ ಕ್ಷೇತ್ರದ ಅಭಿವೃದ್ಧಿ ಕಾರ್ಯಗಳು ಆಗುತ್ತಿಲ್ಲ. ಅಧಿಕಾರಿಗಳ ಮನೋಧೋರಣೆಯೂ ಬದಲಾಗಿಲ್ಲ. (3ನೇ ಪುಟಕ್ಕೆ)

## ದಾವಣಗೆರೆ - ಹರಿಹರ ಅರ್ಬನ್ ಬ್ಯಾಂಕ್ ಅಧ್ಯಕ್ಷರಾಗಿ ಮುರುಗೇಶ್ ಪುನರಾಯ್ಕೆ, ಉಪಾಧ್ಯಕ್ಷರಾಗಿ ಜಯಮ್ಮ

### ಅತ್ಯಾಧುನಿಕ ತಂತ್ರಜ್ಞಾನದೊಂದಿಗೆ ಬ್ಯಾಂಕ್ ಪ್ರಗತಿ ಪಥದಲ್ಲಿದೆ : ಅಧ್ಯಕ್ಷ ಮುರುಗೇಶ್

ದಾವಣಗೆರೆ, ಜು.28- ಅತ್ಯಾಧುನಿಕ ತಂತ್ರಜ್ಞಾನಗಳ ಅಳವಡಿಕೆಯೊಂದಿಗೆ ಗ್ರಾಹಕರಿಗೆ ಅತ್ಯುತ್ತಮ ಸೇವೆ ಒದಗಿಸುತ್ತಿರುವ ದಾವಣಗೆರೆ - ಹರಿಹರ ಅರ್ಬನ್ ಸಹಕಾರ ಬ್ಯಾಂಕ್ 5 ಕೋಟಿ 53 ಲಕ್ಷ ರೂ. ಲಾಭದೊಂದಿಗೆ ಪ್ರಗತಿ ಪಥದಲ್ಲಿ ಮುಂದುವರೆಯುತ್ತಿದೆ ಎಂದು ನೂತನ ಅಧ್ಯಕ್ಷ ಎನ್.ಎ. ಮುರುಗೇಶ್ ಹೇಳಿದರು.





ಬ್ಯಾಂಕಿನ ಅಧ್ಯಕ್ಷ - ಉಪಾಧ್ಯಕ್ಷ ಸ್ಥಾನಗಳಿಗೆ ಇಂದು ಅವಿರೋಧ ಆಯ್ಕೆ ನಂತರ ಮಾತನಾಡಿದ ಅವರು, 2018ರ ಸಾಲಿನಲ್ಲಿ ಸುಮಾರು 185 ಕೋಟಿ ರೂ. ನಷ್ಟು ಇದ್ದ ಠೇವಣಿ ಮೊತ್ತವು 2023 ಕ್ಕೆ ಸುಮಾರು 323 ಕೋಟಿ ರೂ.ಗೆ ಏರಿಕೆಯಾಗಿದ್ದು, ಸಾಲ ಮತ್ತು ಮುಂಗಡಗಳ ಮೊತ್ತವು ಸುಮಾರು 165 ಕೋಟಿ ರೂ. ನಿಂದ 270 ಕೋಟಿ ರೂ.ಗಳಿಗೆ ಏರಿಕೆಯಾಗಿದೆ.

ಬ್ಯಾಂಕಿನ ಸ್ವಂತ ಬಂಡವಾಳವು 35 ಕೋಟಿ ರೂ.ಗಳಿಂದ 55 ಕೋಟಿ ರೂ.ಗಳಿಗೆ ಹಾಗೂ ಭದ್ರತೆ 63 ಕೋಟಿ ರೂ.ಗಳಿಂದ 89 ಕೋಟಿಗೆ ಏರಿಕೆಯಾಗಿದ್ದು, ಇದು ಬ್ಯಾಂಕಿನ ಸದೃಢತೆಯನ್ನು ಸಾಕ್ಷೀಕರಿಸುತ್ತದೆ ಎಂದರಲ್ಲದೇ, ಫೋನ್ ಪೇ ಹಾಗೂ ಗೂಗಲ್ ಪೇ ವ್ಯವಸ್ಥೆಗಳನ್ನು ಸದಸ್ಯರುಗಳಿಗೆ ವಿಸ್ತರಿಸುವಲ್ಲಿ ತಮ್ಮ ಬ್ಯಾಂಕ್ ಜಿಲ್ಲೆಯಲ್ಲೇ ಸಾಧನೆ ಮಾಡಿದೆ ಎಂದ ಮುರುಗೇಶ್ ಅವರು, ಘರ್ಷಣೆ ಇಲ್ಲದೇ ಮನವೊಲಿಸಿ, ಸಾಲ ವಸೂಲಾತಿಯಲ್ಲೂ ಯಶಸ್ವಿಯಾಗಿದ್ದೇವೆ ಎಂದು ಹೇಳಿದರು.

ನಮ್ಮ ಯೋಜನೆಗಳೆಲ್ಲಾ ಬ್ಯಾಂಕಿಗೆ ಲಾಭದಾಯಕವಾಗಬೇಕೆಂಬುದೇ ನಮ್ಮ ಮೂಲ ಧ್ಯೇಯವಾಗಿದ್ದು, ರಿಸರ್ವ್ ಬ್ಯಾಂಕಿನ ನಿಬಂಧನೆ ಹಾಗೂ ಕಾನೂನುಗಳಿಗೆ ಚ್ಯುತಿ ಇಲ್ಲದಂತೆ ಬ್ಯಾಂಕು ಮುನ್ನಡೆಯುತ್ತಿದೆ. ಮೂರು ಹೊಸ ಶಾಖೆಗಳನ್ನು ತೆರೆಯಲು ಅನುಮತಿ ದೊರೆತಿದ್ದು, ಶೀಘ್ರವೇ ವಿದ್ಯಾನಗರ, ಶಾಬನೂರು ಹಾಗೂ ಸರಸ್ವತಿ ಬಡಾವಣೆಗಳಲ್ಲಿ ಶಾಖೆಗಳು ಆರಂಭವಾಗಲಿವೆ. ಬ್ಯಾಂಕಿನ ಆಡಳಿತ ಕಚೇರಿ, ಸಿಓಎಂ ಶಾಖೆ ಹಾಗೂ ಹರಿಹರ ಶಾಖೆಗಳನ್ನು ಸಂಪೂರ್ಣ ಹವಾನಿಯಂತ್ರಿತಗೊಳಿಸಲಾಗಿದೆ ಎಂದರು.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಚುನಾವಣೆಯು ಪಾರದರ್ಶಕವು ಕಾನೂನು ಮತ್ತು ನಿಯಮ ಬದ್ಧವೂ ಆಗಿರಬೇಕೆಂಬುದು ನಮ್ಮ ಉದ್ದೇಶವಾಗಿದ್ದು, ಅವಿರೋಧ ಆಯ್ಕೆಯಾಗುವ ಮೂಲಕ ಬ್ಯಾಂಕಿನ ಲಕ್ಷಾಂತರ ರೂ. ಚುನಾವಣಾ ವೆಚ್ಚವೂ ಉಳಿತಾಯವಾಗಿದೆ. ನಿರ್ದೇಶಕ ಮಂಡಳಿ, ಸರ್ವ ಸದಸ್ಯರು, ಉತ್ತಮ ಸಾಲಗಾರರು, ಠೇವಣಿದಾರರು, ಪಿಗ್ಮಿದಾರರು, ಬ್ಯಾಂಕಿನ ಸಿಬ್ಬಂದಿ, ಸಹಕಾರ ಇಲಾಖೆಯವರು, ಲೆಕ್ಕಪರಿಶೋಧಕರು ಮುಂತಾಗಿ ಎಲ್ಲರ ಸಹಕಾರ, ಹಿರಿಯರಾದ ಎಸ್.ಕೆ.ವೀರಣ್ಣ, ರಮಣ್ ಲಾಲ್ ಪಿ.ಸಂಘವಿ ಮುಂತಾದ ಹಿರಿಯರ ಮಾರ್ಗದರ್ಶನ ಬ್ಯಾಂಕಿನ ಅಭಿವೃದ್ಧಿಗೆ ಕಾರಣವಾಗಿದೆ ಎಂದರು.

ಚುನಾವಣಾ ಅಧಿಕಾರಿಯಾಗಿ ರಿಟರ್ನಿಂಗ್ ಆಫೀಸರ್ ಎಲ್.ಸತೀಶ್ ನಾಯಕ ಉಪಸ್ಥಿತಿಯಲ್ಲಿ ಅಧ್ಯಕ್ಷರಾಗಿ ಎನ್.ಎ.ಮುರುಗೇಶ್ ಹೆಸರನ್ನು ಎ. ಹೆಚ್.ಕುಬೇರಪ್ಪ ಸೂಚಿಸಿದರು. ಕಿರುವಾಡಿ ಸೋಮಶೇಖರ್ ಅನುಮೋದಿಸಿದರು. ಉಪಾಧ್ಯಕ್ಷರಾಗಿ ಶ್ರೀಮತಿ ಜಯಮ್ಮ ಪರಶುರಾಮಪ್ಪ ಹೆಸರನ್ನು ಕೆ.ಪಿ. ಅನಿತಾ ಸೂಚಿಸಿದರೆ, ಶಂಕರ್‌ರಾವ್ ಖಟಾವಕರ್ ಅನುಮೋದಿಸಿದರು.

ನಿರ್ದೇಶಕರುಗಳಾಗಿ (3ನೇ ಪುಟಕ್ಕೆ)

## ಐಫೋನ್ ಖರೀದಿಗಾಗಿ ಎಂಟು ತಿಂಗಳ ಮಗು ಮಾರಿದ ದಂಪತಿ

ಕೊಲ್ಕೊತಾ, ಜು. 28 - ಐಫೋನ್ ಖರೀದಿಸಿ, ರೀಲ್‌ಗಳನ್ನು ಮಾಡಲು ಪಶ್ಚಿಮ ಬಂಗಾಳದ ದಂಪತಿ ತಮ್ಮ ಎಂಟು ತಿಂಗಳ ಮಗನನ್ನು ಮಾರಿರುವುದಾಗಿ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಕೊಲ್ಕೊತಾ ಬಳಿಯ ಗಂಗಾನಗರ ಎಂಬಲ್ಲಿ ಈ ಘಟನೆ ನಡೆದಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ತಾಯಿಯನ್ನು ಬಂಧಿಸಲಾಗಿದ್ದು, ತಂದೆಯ ಶೋಧ ನಡೆದಿದೆ.

ಕೆಲ ವಾರಗಳಿಂದ ದಂಪತಿಯ ಮಗ ಕಾಣುತ್ತಿರಲಿಲ್ಲ. ಈ ಬಗ್ಗೆ ಅನುಮಾನಗೊಂಡ ಸ್ಥಳೀಯರು ಪೊಲೀಸರ ಗಮನಕ್ಕೆ ವಿಷಯ ತಂದಿದ್ದಾರೆ. ತನಿಖೆ ನಡೆಸಿದಾಗ ಇಡೀ ಪ್ರಕರಣ ಬೆಳಕಿಗೆ ಬಂದಿದೆ. ಸಾಮಾಜಿಕ ಜಾಲತಾಣಗಳಲ್ಲಿ ಅಲ್ಪಾವಧಿಯ ವಿಡಿಯೋ ಆದ ರೀಲ್‌ಗಳನ್ನು ಮಾಡುವ ಸಲುವಾಗಿ ಐಫೋನ್ ಖರೀದಿಸಲು (3ನೇ ಪುಟಕ್ಕೆ)


# ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ 27.07.2023ರ ಗುರುವಾರ ಬೆಳಿಗ್ಗೆ 5.30ಕ್ಕೆ ನಿಧನರಾದ
ಶಾಮನೂರಿನ ಸಣ್ಣಹಾಲಪ್ಪ ಶ್ರೀಮತಿ ಅನಿತಾ, ಎಸ್. ಚಂದ್ರಶೇಖರಪ್ಪ ಅವರ ಪುತ್ರರೂ,
ನಮ್ಮ ಆತ್ಮೀಯರೂ ಆದ

**ಶ್ರೀ ಎಸ್. ಸಿ. ಕೇಶವ್**

ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ. ಮೃತರ ಆತ್ಮಕ್ಕೆ ಚಿರಶಾಂತಿ ನೀಡಲೆಂದು
ಹಾಗೂ ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ದಯಾಮಯನಾದ
ಭಗವಂತನು ಅವರ ಕುಟುಂಬ ವರ್ಗಕ್ಕೆ ದಯಪಾಲಿಸಲೆಂದು ಪ್ರಾರ್ಥನೆ.

- ಬಿ. ಓಂಕಾರಪ್ಪ
- ಎನ್. ಬಿ. ನಾಗರಾಜ್
- ಬಿ. ಶಿವಕುಮಾರ್
- ಬಿ. ಎನ್. ಅನಂತ್ ಕುಮಾರ್
- ಚಿದಪ್ಪರ ಬಿ. ರಾಜು
- ಎ. ವಿ. ನಾಗರಾಜ್ (ಪಾಪಣ್ಣ)
- ಹಾಲುವರ್ತಿ ಕಲ್ಲೇಶ್
- ಎಸ್. ಬಿ. ಸಿದ್ದೇಶ್

**ಶಾಮನೂರು ಗ್ರಾಮಸ್ಥರು ಹಾಗೂ ಬಂಧು-ಮಿತ್ರರು**


## 160 ಅಡಿ ತಲುಪಿದ ಭದ್ರಾ ಜಲಾಶಯ

ಶಿವಮೊಗ್ಗ, ಜು.28- ಮಲೆನಾಡಿನಲ್ಲಿ ಮಳೆ ಪ್ರಮಾಣ ಕಡಿಮೆಯಾಗಿದ್ದು, ಜಲಾಶಯಗಳಿಗೆ ಬರುವ ನೀರಿನ ಒಳಹರಿವೂ ಸಹ ಕಡಿಮೆಯಾಗಿದೆ. ಶುಕ್ರವಾರ ಬೆಳಿಗ್ಗೆ 16,041 ಕ್ಯೂಸೆಕ್ಸ್ ಇದ್ದ ಒಳಹರಿವು ಸಂಜೆ ಮತ್ತಷ್ಟು ಕಡಿಮೆಯಾಗಿದೆ.

ಜಲಾಶಯದ ನೀರಿನ ಮಟ್ಟ 160 ಅಡಿಗೆ ತಲುಪಿತ್ತು. ಗಾಜನೂರಿನ ತುಂಗಾ ಜಲಾಶಯಕ್ಕೆ ಶುಕ್ರವಾರ ಸಂಜೆ 18 ಸಾವಿರ ಕ್ಯೂಸೆಕ್ಸ್ ಇದ್ದು, ಅಷ್ಟೇ ಪ್ರಮಾಣದ ನೀರನ್ನು ನದಿಗೆ ಬಿಡುಲಾಗುತ್ತಿದೆ.

ಇದರಿಂದಾಗಿ ತುಂಗಭದ್ರಾ ನದಿಯಲ್ಲಿ ನೀರಿನ ಹರಿವು ಇನ್ನಷ್ಟು ಕಡಿಮೆಯಾಗಿದ್ದು, ಜಲಾವೃತ್ತಗೊಂಡಿದ್ದ ತೋಟ-ಗದ್ದೆಗಳು ಕಾಣಿಸಿಕೊಂಡವು.


# ಹೃದಯಪೂರ್ವಕ ಅಭಿನಂದನೆಗಳು



ಪ್ರತಿಷ್ಠಿತ ದಾವಣಗೆರೆ - ಹರಿಹರ ಅರ್ಬನ್ ಸಹಕಾರ ಬ್ಯಾಂಕ್ ಆಡಳಿತ ಮಂಡಳಿ ಅಧ್ಯಕ್ಷರಾಗಿ ಅವಿರೋಧವಾಗಿ ಪುನರಾಯ್ಕೆಯಾಗಿರುವ

**ಶ್ರೀ ಎನ್.ಎ. ಮುರುಗೇಶ್**

ಅವರಿಗೆ ಹೃದಯಪೂರ್ವಕ ಅಭಿನಂದನೆಗಳು.

- ಶ್ರೀಮತಿ ಗೀತಾ ಎ.ಎಂ. ಕೊಟ್ರೇಶ್, ಮಾಲೀಕರು, ಝೇಂಕಾರ ಇವೆಂಟ್ಸ್
- ಬೆಳ್ಳೂಡಿ ಜ್ಯೋತಿಪ್ರಕಾಶ್, ವರ್ತಕರು
- ಎನ್.ಎಂ. ಹಾಲಸ್ವಾಮಿ, ವರ್ತಕರು
- ಜಿ. ಸುರ್ಜಿತ್, ಮಾಲೀಕರು, ಡಿಸ್ಟ್ರಿಕ್ಟ್ 17
- ಕೆ. ಬಸವರಾಜ್, ಪ್ರಥಮ ದರ್ಜೆ ಗುತ್ತಿಗೆದಾರರು
- ವೈ. ಜಿ. ಸುಜಯ್
- ಹೆಚ್.ಬಿ. ಶಿವಕುಮಾರ್



## ಕಲಾಕುಂಚ : ಇಂದು - ನಾಳೆ ಪುರಸ್ಕಾರ

ದಾವಣಗೆರೆ, ಜು. 28- ಕಲಾಕುಂಚ ಸಾಂಸ್ಕೃತಿಕ ಸಂಸ್ಥೆ ವತಿಯಿಂದ ಎಸ್.ಎಸ್.ಎಲ್.ಸಿ. ಪರೀಕ್ಷೆ ಕನ್ನಡ ವಿಷಯದಲ್ಲಿ ಅತೀ ಹೆಚ್ಚು ಅಂಕ ಪಡೆದ ಮಕ್ಕಳಿಗೆ ಪ್ರಶಸ್ತಿ ಪುರಸ್ಕಾರ ಸಮಾರಂಭವನ್ನು ನಾಳೆ ದಿನಾಂಕ 29 ಹಾಗೂ 30ರಂದು ನಗರದ ಶಾಮನೂರು ಶಿವಶಂಕರಪ್ಪ ಪಾರ್ವತಮ್ಮ ಸಮುದಾಯ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಸಂಸ್ಥೆಯ ಸಂಸ್ಥಾಪಕ ಸಾಲಿಗ್ರಾಮ ಗಣೇಶ್ ಶೆಣೈ ತಿಳಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕನ್ನಡದಲ್ಲಿ 125ಕ್ಕೆ 120 ರಿಂದ 124 ರವರೆಗೆ ಅಂಕ ಪಡೆದ ಮಕ್ಕಳಿಗೆ 'ಕನ್ನಡ ಕುವರ-ಕುವರಿ' ಜಿಲ್ಲಾ ಪ್ರಶಸ್ತಿ, 125 ಪೂರ್ಣ ಅಂಕ ಪಡೆದ ಮಕ್ಕಳಿಗೆ ರಾಜ್ಯ ಮಟ್ಟದ 'ಕನ್ನಡ ಕೌಸ್ತುಭ' ರಾಜ್ಯ ಪ್ರಶಸ್ತಿ, ಮತ್ತು 625 ಕ್ಕೆ 600 ಕ್ಕೂ ಹೆಚ್ಚು ಅಂಕ ಪಡೆದ ಮಕ್ಕಳಿಗೆ ಕರ್ನಾಟಕ ರಾಜ್ಯ ವ್ಯಾಪ್ತಿಯಲ್ಲಿ 'ಸರಸ್ವತಿ ಪುರಸ್ಕಾರ' ರಾಜ್ಯ ಪ್ರಶಸ್ತಿ ನೀಡಿ ಗೌರವಿಸಲಾಗುವುದು ಎಂದರು.

29ರ ಶನಿವಾರ ಬೆಳಿಗ್ಗೆ 10.30ಕ್ಕೆ ಕರ್ನಾಟಕ ಸುಗಮ ಸಂಗೀತ ಪರಿಷತ್ತಿನ ರಾಜ್ಯಾಧ್ಯಕ್ಷ ವೈ.ಕೆ.ಮುದ್ದುಕೃಷ್ಣ ಸಮಾರಂಭ ಉದ್ಘಾಟಿಸಲಿದ್ದು, ಸಂಸ್ಥೆಯ ಅಧ್ಯಕ್ಷ ಕೆ.ಎಚ್.ಮಂಜುನಾಥ್ ಅಧ್ಯಕ್ಷತೆ ವಹಿಸಿಕೊಳ್ಳಲಿದ್ದಾರೆ. ಮುಖ್ಯ ಅತಿಥಿಗಳಾಗಿ ಸಂಗೀತ ನಿರ್ದೇಶಕರಾದ ನಗರ ಶ್ರೀನಿವಾಸ್ ಉಡುಪ, ಸುಗಮ ಸಂಗೀತ ಅಕಾಡೆಮಿಯ ಅಧ್ಯಕ್ಷ ಡಾ. ಕಿಕ್ಕೇರಿ ಕೃಷ್ಣಮೂರ್ತಿ, ಮೋತಿ ಪರಮೇಶ್ವರ ರಾವ್, ಕಲಾಕುಂಚ ಮಹಿಳಾ ವಿಭಾಗದ ಅಧ್ಯಕ್ಷರಾದ ಶ್ರೀಮತಿ ಹೇಮಾ ಶಾಂತಪ್ಪ ಪೂಜಾರಿ ಉಪಸ್ಥಿತರಿರುತ್ತಾರೆ.

ಜು.30 ರಂದು ಭಾನುವಾರ ಬೆಳಿಗ್ಗೆ 10.30ಕ್ಕೆ ಚಲನಚಿತ್ರ ನಟ, ನಿರ್ದೇಶಕ ಟಿ.ಎಸ್.ನಾಗಾಭರಣ ಸಮಾರಂಭ ಉದ್ಘಾಟಿಸಲಿದ್ದು, ಶ್ರೀಮತಿ ಸರಸ್ವತಿ ದಾಸಪ್ಪ ಶೆಣೈ ಪ್ರತಿಷ್ಠಾನದ ಅಧ್ಯಕ್ಷ ಡಾ. ನಾಗೇಶ್ ಸಂಜೀವ ಕಿಣಿ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾಧ್ಯಕ್ಷ ಬಿ.ವಾಮದೇವಪ್ಪ, ಶ್ರೀ ಸಿದ್ಧಗಂಗಾ ವಿದ್ಯಾಸಂಸ್ಥೆಯ ಮುಖ್ಯಸ್ಥೆ ಶ್ರೀಮತಿ ಜಸ್ಟಿನ್ ಡಿ.ಸೌಜ ಆಗಮಿಸಲಿದ್ದಾರೆ. ಕುಮಾರಿ ಭೂಮಿಕಾ ರಮೇಶ್ ಪೈ, ಕಲಾಕುಂಚ ಮಹಿಳಾ ವಿಭಾಗದ ಗೌರವ ಅಧ್ಯಕ್ಷೆ ಶ್ರೀಮತಿ ವಸಂತಿ ಮಂಜುನಾಥ್ ಗೌರವ ಉಪಸ್ಥಿತರಿರಲಿದ್ದಾರೆ ಎಂದರು.

ದಾವಣಗೆರೆ ಜಿಲ್ಲೆ ಸೇರಿದಂತೆ ನಾಡಿನ ವಿವಿಧ ಜಿಲ್ಲೆಗಳಿಂದ ಸುಮಾರು 965 ವಿದ್ಯಾರ್ಥಿ, ವಿದ್ಯಾರ್ಥಿಗಳು ಪ್ರಶಸ್ತಿ ಪ್ರದಾನಕ್ಕೆ ಆಗಮಿಸಲಿದ್ದು, ಕಳೆದ 33 ವರ್ಷಗಳಿಂದ 36 ಸಾವಿರ ಮಕ್ಕಳಿಗೆ ಪ್ರಶಸ್ತಿ ನೀಡಿ ಗೌರವಿಸಲಾಗಿದೆ ಎಂದು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಸಂಸ್ಥೆಯ ಅಧ್ಯಕ್ಷ ಕೆ. ಹೆಚ್. ಮಂಜುನಾಥ್, ವಸಂತಿ ಮಂಜುನಾಥ್, ಹೇಮಾ ಶಾಂತಪ್ಪ ಪೂಜಾರಿ, ಜ್ಯೋತಿ ಗಣೇಶ್ ಶೆಣೈ, ಮಹದೇವ ಅಸಗೋಡು ಉಪಸ್ಥಿತರಿದ್ದರು.

## ಒಬ್ರೀನ್ ವರ್ತನೆಗೆ ಅಸಮಾಧಾನ; ಕಲಾಪ ಮುಂದೂಡಿದ ಧನಕರ್

ನವದೆಹಲಿ, ಜು. 28 - ರಾಜ್ಯಸಭೆಯಲ್ಲಿ ತೃಣಮೂಲ ಕಾಂಗ್ರೆಸ್ ಸಂಸದ ಡೆರೆಕ್ ಒಬ್ರೀನ್ ಅವರು ಮಣಿಪುರ ಪರಿಸ್ಥಿತಿ ಕುರಿತು ಚರ್ಚೆಗೆ ಒತ್ತಾಯಿಸಿ ರಾಜ್ಯಸಭಾಧ್ಯಕ್ಷ ಜಗದೀಪ್ ಧನಕರ್ ಜೊತೆ ಜಟಾಪಟಿ ನಡೆಸಿದರು.

ಇದರಿಂದಾಗಿ ಧನಕರ್ ಕಲಾಪವನ್ನು ನಾಳೆಗೆ ಮುಂದೂಡಿದ್ದಾರೆ. ನಿಯಮ 267 ರ ಅಡಿಯಲ್ಲಿ ಚರ್ಚೆಗೆ ಅವಕಾಶ ನೀಡಬೇಕು ಎಂದು ಒಬ್ರೀನ್ ಅವರು ಮೇಜು ಕುಟ್ಟಿ ಮಾತನಾಡಿದರು. ಈ ರೀತಿಯ ವರ್ತನೆಯನ್ನು ಒಪ್ಪುವುದಿಲ್ಲ ಎಂದು ಹೇಳಿದ ಧನಕರ್, ಕಲಾಪವನ್ನು ನಾಳೆಗೆ ಮುಂದೂಡುವುದಾಗಿ ಹೇಳಿದರು.



## ತುಂಗಭದ್ರಾ ನದಿ ವೀಕ್ಷಣೆಗೆ ಹರಿದು ಬರುತ್ತಿರುವ ಜನರ ದಂಡು

ಹರಿಹರ, ಜು. 28- ಮೈದುಂಬಿ ಹರಿಯುತ್ತಿರುವ ತುಂಗಭದ್ರಾ ನದಿಯನ್ನು ವೀಕ್ಷಿಸಲು ಸಾರ್ವಜನಿಕರ ದಂಡು ಹರಿದು ಬರುತ್ತಿದೆ.

ಕಳೆದ ಹಲವಾರು ದಿನಗಳಿಂದ ಧಾರಾಕಾರವಾಗಿ ಸುರಿಯುತ್ತಿರುವ ಮಳೆಯಿಂದಾಗಿ ನದಿಯಲ್ಲಿ ಅಧಿಕ ಪ್ರಮಾಣದ ನೀರು ಹರಿದು ಬರುತ್ತಿದೆ. ನದಿ ವೀಕ್ಷಿಸಲು ಪ್ರತಿನಿತ್ಯ ಕುಟುಂಬ ಸಮೇತ ಸಹಸ್ರಾರು ಸಂಖ್ಯೆಯಲ್ಲಿ ಸಾರ್ವಜನಿಕರು ಆಗಮಿಸುವುದು ಸರ್ವೇ ಸಾಮಾನ್ಯವಾಗಿದೆ.

ಆಗಮಿಸುವ ಪ್ರವಾಸಿಗರು ನದಿಯಲ್ಲಿ ಹರಿಯುವ ನೀರಿನ ಪಕ್ಕದಲ್ಲಿ ಮತ್ತು ಸೇತುವೆಯ ಮೇಲೆ ಹಾದು ಹೋಗಿರುವ ಗೋಡೆಯ ಮೇಲೆ ನಿಂತು ಸೆಲ್ಫಿ ಪೋಟೋ ತೆಗೆದುಕೊಳ್ಳುತ್ತಿದ್ದಾರೆ. ಅದರಲ್ಲಿ ಚಿಕ್ಕ ಚಿಕ್ಕ ವಯಸ್ಸಿನ ಮಕ್ಕಳನ್ನು ಸೇತುವೆಯ ಮೇಲೆ ನಿಲ್ಲಿಸಿ ಪೋಟೋ ತೆಗೆಯುವ ಹುಚ್ಚಾಟವನ್ನು ಕೂಡ ಕುಟುಂಬದ ಸದಸ್ಯರು ಮಾಡುತ್ತಿದ್ದಾರೆ.

ಈಗಾಗಲೇ ರಾಜ್ಯದ ಹಲವಾರು ಕಡೆಗಳಲ್ಲಿ ಸೆಲ್ಫಿ ಹುಚ್ಚಾಟಕ್ಕೆ ಜೀವವನ್ನೇ ಕಳೆದುಕೊಂಡಿರುವ ಘಟನೆಗಳು ನಡೆಯುತ್ತಿದರೂ ಸಹ, ಇಲ್ಲಿನ ಪ್ರವಾಸಿಗರು ಎಚ್ಚೆತ್ತುಕೊಳ್ಳದೇ ಇರುವುದನ್ನು ಕಾಣಬಹುದಾಗಿದೆ.

ನದಿ ಸೊಬಗನ್ನು ವೀಕ್ಷಿಸಲು ಆಗಮಿಸುವ ಪ್ರವಾಸಿಗರು ಕಾರಾ ಮಂಡಕ್ಕಿ, ಮೆಣಸಿನಕಾಯಿ, ಬಜಿ, ಶೇಂಗಾ, ಪೇರಲ ಹಣ್ಣು ಸೇರಿದಂತೆ ವಿವಿಧ ಖಾದ್ಯಗಳಿಗೆ ಇಲ್ಲಿ ಭರಪೂರ ಬೇಡಿಕೆ ಬಂದಿದೆ.

ನದಿಯ ವೀಕ್ಷಿಸಲು ಆಗಮಿಸುವ ಪ್ರವಾಸಿಗರು ನದಿಯಲ್ಲಿ ಇಳಿಯದಂತೆ ತಡೆಯುವ ದೃಷ್ಟಿಯಿಂದ ಪೊಲೀಸ್ ಇಲಾಖೆ ಓರ್ವ ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಿದೆ. ಆದರೆ ಸೇತುವೆಯ ಮೇಲೆ ಇರುವ ಗೋಡೆಯ ಮೇಲೆ ನಿಂತು ಪೋಟೋ ಕ್ಲಿಕ್ ಮಾಡುವವರನ್ನು ತಡೆಯಲು ಯಾರೂ ಇಲ್ಲವಾಗಿದೆ. ಇದರ ಬಗ್ಗೆ ಜಾಗೃತಿ ವಹಿಸಬೇಕಾಗಿದೆ.

ನದಿ ವೀಕ್ಷಿಸಲು ಆಗಮಿಸುವ ಜನತೆ, ನದಿ ಪಕ್ಕದಲ್ಲಿ ಇರುವಂತಹ ಶ್ರೀ ಹರಿಹರೇಶ್ವರ ಸ್ವಾಮಿ, ರಾಘವೇಂದ್ರ ಸ್ವಾಮಿ, ಆಂಜನೇಯ ಸ್ವಾಮಿ, ಅಯ್ಯಪ್ಪ ಸ್ವಾಮಿ, ಚೌಡಮ್ಮ ದೇವಿ ದೇವಸ್ಥಾನಕ್ಕೆ ಭೇಟಿ ನೀಡಿ ದೇವರ ದರ್ಶನ ಪಡೆಯುತ್ತಿದ್ದಾರೆ.

## ಕೊಮಾರನಹಳ್ಳಿ : ಮಳೆಗೆ ಮನೆ ಕುಸಿತ



ಮಲೇಬೆನ್ನೂರು, ಜು. 28 - ಮಳೆಯಿಂದಾಗಿ ಕೊಮಾರನಹಳ್ಳಿ, ಕೆ.ಎನ್. ಹಳ್ಳಿ, ಹೊಳೆಸಿರಿಗೆರೆ ಮತ್ತು ಹಿಂಡಸಘಟ್ಟ ಗ್ರಾಮಗಳಲ್ಲಿ ತಲಾ ಒಂದೊಂದು ಮನೆಗೆ ಭಾಗಶ: ಹಾನಿಯಾಗಿದೆ.

ಕೊಮಾರನಹಳ್ಳಿಯಲ್ಲಿ ಗೋಡೆ ಕುಸಿದು ಬಿದ್ದಿರುವ ಮೂರ್ತೆಪ್ಪ ಅವರ ಮನೆಗೆ ಶುಕ್ರವಾರ ಉಪತಹಶೀಲ್ದಾರ್ ಆರ್.ರವಿ, ಗ್ರಾಮ ಲೆಕ್ಕಾಧಿಕಾರಿ ಅಣ್ಣಪ್ಪ ಭೇಟಿ ನೀಡಿ ಪರಿಶೀಲಿಸಿದರು.

## ನಗರದಲ್ಲಿ ಇಂದು ಕುರಿ, ಮೇಕೆ ಸಾಕಾಣಿಕೆ ತರಬೇತಿ ಶಿಬಿರ

ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ ವತಿಯಿಂದ ಪಶು ಆಸ್ಪತ್ರೆ ಆವರಣದಲ್ಲಿರುವ ಪಶುಪಾಲನಾ ಮತ್ತು ಪಶುವೈದ್ಯಕೀಯ ತರಬೇತಿ ಕೇಂದ್ರದಲ್ಲಿ ಕುರಿ ಮತ್ತು ಮೇಕೆ ಸಾಕಾಣಿಕೆ ತರಬೇತಿಯು ಇಂದು ನಡೆಯಲಿದೆ. ವಿವರಕ್ಕೆ ಸಂಪರ್ಕಿಸುವ ದೂರವಾಣಿ : 08192-233787.

## ಶಿಕ್ಷಣದ ಜೊತೆ ಆತ್ಮಸ್ಥೈರ್ಯ ಬೆಳೆಸುವ ಎನ್‌ಇಪಿ

**ಭೌತಶಾಸ್ತ್ರ ಅಧ್ಯಯನ ವಿಭಾಗದ ಸಹ ಪ್ರಾಧ್ಯಾಪಕ ಕೆ.ಎಂ. ಈಶ್ವರಪ್ಪ**

ದಾವಣಗೆರೆ, ಜು.28- ವಿದ್ಯಾರ್ಥಿಗಳಲ್ಲಿ ಶಿಕ್ಷಣದ ಜೊತೆಗೆ ಸ್ವಾವಲಂಬಿ ಬದುಕಿನ ಬಗ್ಗೆ ಆತ್ಮಸ್ಥೈರ್ಯ ಬೆಳೆಸುವುದೇ ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯ ಉದ್ದೇಶವಾಗಿದೆ ಎಂದು ದಾವಣಗೆರೆ ವಿಶ್ವವಿದ್ಯಾನಿಲಯದ ಭೌತಶಾಸ್ತ್ರ ಅಧ್ಯಯನ ವಿಭಾಗದ ಸಹ ಪ್ರಾಧ್ಯಾಪಕ ಕೆ.ಎಂ. ಈಶ್ವರಪ್ಪ ಹೇಳಿದರು.

ರಾಷ್ಟ್ರೀಯ ಶಿಕ್ಷಣ ನೀತಿ ಜಾರಿಯಾಗಿ, ಮೂರು ವರ್ಷ ಪೂರೈಸಿರುವ ಹಿನ್ನೆಲೆಯಲ್ಲಿ, ತಾಲ್ಲೂಕಿನ ಆವರಗೊಳ್ಳ ಗ್ರಾಮದ ಬಳಿಯ ಕೇಂದ್ರೀಯ ವಿದ್ಯಾಲಯದಲ್ಲಿ ಶುಕ್ರವಾರ ಪತ್ರಿಕಾಗೋಷ್ಠಿ ನಡೆಸಿ ಅವರು ಮಾತನಾಡಿದರು.

ರಾಷ್ಟ್ರೀಯ ಶಿಕ್ಷಣ ನೀತಿ ಬಗ್ಗೆ ಆತಂಕ ಪಡುವ ಅಗತ್ಯವಿಲ್ಲ. ಈ ನೀತಿ ಸಮಾಜಕ್ಕೆ ಮತ್ತು ವಿದ್ಯಾರ್ಥಿಗಳಿಗೆ ಬೇಕಾಗಿರುವ ಅಗತ್ಯ ಮಾಹಿತಿ ನೀಡಿ, ಭಾರತವನ್ನು ಆರ್ಥಿಕವಾಗಿ ಸಶಕ್ತಗೊಳಿಸಲಿದೆ ಎಂದು ಹೇಳಿದರು.

ಪದವಿ ತರಗತಿಗಳಿಗೆ ಪಠ್ಯ ಕ್ರಮ ತಯಾರಿಸಲು ರಾಜ್ಯ ಮಟ್ಟದಲ್ಲಿ ಅಸ್ತಿತ್ವಕ್ಕೆ ತಂದಿರುವ ಸಮಿತಿಯು ಪಠ್ಯ ಸಿದ್ಧ ಪಡಿಸುವ, ಪರಿಷ್ಕರಿಸುವ ಕಾರ್ಯ ಮಾಡಲಿದೆ ಎಂದು ಈಶ್ವರಪ್ಪ ಹೇಳಿದರು.

ಯುಬಿಡಿಟಿ ಕಾಲೇಜಿನ ಪ್ರಾಧ್ಯಾಪಕ ಡಾ. ನಾಗೇಶ್ ಮಾತನಾಡಿ, ನೂತನ ಶಿಕ್ಷಣ ನೀತಿಯು ವಿದ್ಯಾರ್ಥಿಗಳಿಗೆ ತರಗತಿ ಕೊಠಡಿಯೊಳಗಿನ ಶಿಕ್ಷಣದ ಜೊತೆಗೆ ಹೊರಗಡೆ ಕಲಿಯಲು ಅವಕಾಶ ಕಲ್ಪಿಸಿ, ವಿದ್ಯಾರ್ಥಿಯ ಸರ್ವಾಂಗೀಣ ಅಭಿವೃದ್ಧಿಗೆ ಪೂರಕ ವಾತಾವರಣ ಸೃಷ್ಟಿಸಲಿದೆ ಎಂದು ಹೇಳಿದರು.

ಹಿಂದೆ ನಮ್ಮ ತಕ್ಷಶಿಲಾ, ನಲಂದಾ ವಿಶ್ವವಿದ್ಯಾನಿಲಯಗಳು ನೀಡಿದ್ದ, ಭಾರತೀಯ ಸಂಸ್ಕೃತಿಯ ಆಧಾರದಲ್ಲಿ ಗುಣಮಟ್ಟದ ಶಿಕ್ಷಣ ನೀಡಿ, ಶಿಕ್ಷಣ ವ್ಯವಸ್ಥೆಯನ್ನು ಗಟ್ಟಿಗೊಳಿಸಿ ಭಾರತವನ್ನು ವಿಶ್ವಗುರು ಆಗಿಸಬೇಕೆಂಬ ಧ್ಯೇಯವನ್ನು ಹೊಸ ಶಿಕ್ಷಣ ನೀತಿ ಹೊಂದಿದೆ ಎಂದರು.

ಎನ್‌ಇಪಿಯು ಎಂಜಿನಿಯರಿಂಗ್ ಪದವಿಯಲ್ಲಿ ಅಧ್ಯಯನ ಮಾಡುವ ವಿದ್ಯಾರ್ಥಿಗಳಿಗೂ, ಮಾನವೀಯ ಮೌಲ್ಯಗಳ ಬಗ್ಗೆ ತಿಳಿಸುವುದರ ಜತೆಗೆ ಸಂಶೋಧನಾ ವಿಧಾನ, ಪರಿಸರ ಜ್ಞಾನ, ಭಾರತದ ಸಂವಿಧಾನವನ್ನು ಓದಲು ಅನುವು ಮಾಡಿಕೊಟ್ಟಿದೆ.

3ರಿಂದ 8ನೇ ಸೆಮಿಸ್ಟರ್ ವಿದ್ಯಾರ್ಥಿಗಳು ಎನ್‌ಎಸ್‌ಎಸ್, ಯೋಗ, ಕ್ರೀಡೆಗಳಲ್ಲಿ ಯಾವುದಾದರೂ ಒಂದು ಚಟುವಟಿಕೆ ನೋಂದಾಯಿಸಿಕೊಳ್ಳುವುದು ಕಡ್ಡಾಯವಾಗಿದೆ. ನೂತನ ರಾಷ್ಟ್ರೀಯ ಶಿಕ್ಷಣ ನೀತಿ ಅನುಷ್ಠಾನಗೊಂಡ ಮೇಲೆ ಉತ್ತಮ ಫಲಿತಾಂಶ ಬರುತ್ತಿದೆ ಎಂದು ಮಾಹಿತಿ ನೀಡಿದರು.

ಗುಣಮಟ್ಟದ ಶಿಕ್ಷಣ ನೀಡಿ, ವಿದ್ಯಾರ್ಥಿಗಳಲ್ಲಿ ಜಾಗತಿಕ ಜ್ಞಾನ ಬೆಳೆಸಿ ಸ್ಪರ್ಧಾತ್ಮಕ ಜಗತ್ತಿಗೆ ಸ್ಪರ್ಧೆಯೊಡ್ಡಲು ಅಣಿಯಾಗುವಂತೆ ವಿದ್ಯಾರ್ಥಿಗಳನ್ನು ಸಜ್ಜುಗೊಳಿಸುವುದರ ಜತೆಗೆ ವೈಜ್ಞಾನಿಕ ಪ್ರಜ್ಞೆ ಬೆಳೆಸಲು ಎನ್‌ಇಪಿ ಪೂರಕವಾಗಿದೆ ಎಂದು ಜವಹಾರ್ ನವೋದಯ ಶಾಲೆಯ ಪ್ರಾಂಶುಪಾಲರಾದ ವಿಜಯಾ ಹೇಳಿದರು.

21ನೇ ಶತಮಾನಕ್ಕೆ ಬೇಕಾದ ಜ್ಞಾನ ನೀಡಿ ಆತ್ಮ ನಿರ್ಭರ ಭಾರತ ನಿರ್ಮಿಸಲು ಪೂರಕವಾಗಿ ರಾಷ್ಟ್ರೀಯ ಶಿಕ್ಷಣ ನೀತಿಯು ವಿದ್ಯಾರ್ಥಿಗಳನ್ನು ಅಣಿಗೊಳಿಸಲಿದೆ. ಕೇಂದ್ರೀಯ ವಿದ್ಯಾಲಯಗಳಲ್ಲಿ ಪ್ರಾಥಮಿಕ ಶಿಕ್ಷಣದ ಹಂತದಿಂದಲೇ ಕೃತಕ ಬುದ್ಧಿಮತ್ತೆಯ ಪಾಠಗಳನ್ನು ಅಳವಡಿಸಲಾಗಿದೆ ಎಂದು ಕೇಂದ್ರೀಯ ವಿದ್ಯಾಲಯದ ಪ್ರಾಂಶುಪಾಲ ವೀರಭದ್ರ ನಾಯಕ್ ಹೇಳಿದರು. ನೀತು ಪಾಂಡೆ ಮತ್ತಿತರರು ಈ ಸಂದರ್ಭದಲ್ಲಿದ್ದರು.

## ಶಿಥಿಲಗೊಂಡ ಮನೆಯಲ್ಲಿದ್ದ ವೃದ್ಧೆಗೆ ಬೇರೆ ಮನೆಯಲ್ಲಿ ಆಶ್ರಯ



ಮಲೇಬೆನ್ನೂರು, ಜು.28- ಪಟ್ಟಣದ 18ನೇ ವಾರ್ಡ್‌ನಲ್ಲಿ ಮಳೆಯಿಂದ ಶಿಥಿಲಗೊಂಡಿರುವ ಮನೆಯಲ್ಲಿ ವಾಸವಾಗಿದ್ದ ವೃದ್ಧೆಯೊಬ್ಬರನ್ನು ಭೇಟಿ ಮಾಡಿದ ಉಪತಹಶೀಲ್ದಾರ್ ಆರ್.ರವಿ, ಪುರಸಭೆ ಮುಖ್ಯಾಧಿಕಾರಿ ಎ.ಸುರೇಶ್, ವಾರ್ಡ್ ಸದಸ್ಯ ಬಿ.ಮಂಜುನಾಥ್ ಅವರು, ಅವರ ಮನವೊಲಿಸಿ, ಬೇರೆ ಮನೆಗೆ ಕಳುಹಿಸಿದ್ದಾರೆ. ಪಟ್ಟಣದಲ್ಲಿ ಇದೇ ರೀತಿ ಶಿಥಿಲಗೊಂಡಿರುವ ಮನೆಗಳಲ್ಲಿ ವಾಸಿಸುತ್ತಿರುವವರು ಬೇರೆ ಕಡೆಗೆ ಸ್ಥಳಾಂತರವಾಗುವಂತೆ ಪುರಸಭೆ ಮುಖ್ಯಾಧಿಕಾರಿ ಸುರೇಶ್ ಮನವಿ ಮಾಡಿದ್ದಾರೆ. ಗ್ರಾಮ ಲೆಕ್ಕಾಧಿಕಾರಿ ಅಣ್ಣಪ್ಪ, ಗ್ರಾಮ ಸಹಾಯಕ ಮಾರುತಿ ಈ ವೇಳೆ ಹಾಜರಿದ್ದರು.

## ನಗರದಲ್ಲಿ ಇಂದು ರಾಜೇಂದ್ರ ಪ್ರಸಾದ್ ನೀಲಗುಂದ್ ಅವರ ಕೃತಿ ಬಿಡುಗಡೆ

ಸಾಹಿತಿ ರಾಜೇಂದ್ರ ಪ್ರಸಾದ್ ನೀಲಗುಂದ್ ಅವರ ರಚನೆಯ ಹನಿಗವನಗಳ ಸಂಕಲನ 'ಒಡಲೆಂಬೋ ಕಡಲ ಮುತ್ತುಗಳು' ಕೃತಿ ಇಂದು ಬೆಳಿಗ್ಗೆ 10ಕ್ಕೆ ವನಿತಾ ಸಮಾಜದ ಸಭಾಂಗಣದಲ್ಲಿ ಬಿಡುಗಡೆಯಾಗಲಿದೆ.

ಹರಪನಹಳ್ಳಿಯ ಎಸ್.ಯು.ಜೆ.ಎಂ. ಕಾಲೇಜಿನ ಪ್ರಾಂಶುಪಾಲ ಹೆಚ್. ಮಲ್ಲಿಕಾರ್ಜುನ ಅಧ್ಯಕ್ಷತೆಯಲ್ಲಿ ಹಿರಿಯ ಕಥೆಗಾರ್ತಿ ಶ್ರೀಮತಿ ಸುಶೀಲಾದೇವಿ ಆರ್. ರಾವ್ ಅವರು ಕೃತಿಯನ್ನು ಬಿಡುಗಡೆ ಮಾಡುವರು. ಸಾಹಿತಿ ಶಿವಪ್ರಸಾದ್ ಕರ್ಜಗಿ ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ.

ನಗರ ಕೇಂದ್ರ ಗ್ರಂಥಾಲಯದ ಉಪ ನಿರ್ದೇಶಕ ಪಿ.ಆರ್. ತಿಪ್ಪೇಸ್ವಾಮಿ, ಉಪನ್ಯಾಸಕ ಎಸ್.ಆರ್. ನಯನಜಮೂರ್ತಿ, ಸಂಡೂರಿನ ವಕೀಲ ಬಿ.ಎಸ್. ಮಂಜುನಾಥ್, ತೆಲಗಿ ಕಸಾಪ ಅಧ್ಯಕ್ಷ ಕೆ.ಎಸ್. ವೀರಭದ್ರಪ್ಪ, ಜಿಲ್ಲಾ ಕವಿವೃಕ್ಷ ಬಳಗದ ಅಧ್ಯಕ್ಷ ಕೆ.ಎನ್. ರಂಗನಾಥ್ ಅವರುಗಳು ಮುಖ್ಯ ಅತಿಥಿಗಳಾಗಿದ್ದಾರೆ.

## ಮೆಟ್ರಿಕ್ ನಂತರದ ಹಾಸ್ಟೆಲ್‌ಗೆ ಅರ್ಜಿ

ದಾವಣಗೆರೆ, ಜು. 28 - ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳ (ಸಾಮಾನ್ಯ ಪದವಿ ಕೋರ್ಸಿನ ವಿದ್ಯಾರ್ಥಿಗಳಿಗೆ ಮಾತ್ರ) ಪ್ರವೇಶಕ್ಕಾಗಿ ಹೊಸದಾಗಿ ಪ್ರವೇಶ ಬಯಸುವ ವಿದ್ಯಾರ್ಥಿಗಳಿಗೆ ಆನ್‌ಲೈನ್ ಮೂಲಕ ಅರ್ಜಿ ಅಹ್ವಾನಿಸಲಾಗಿದೆ ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಜಿಲ್ಲಾ ಅಧಿಕಾರಿ ಗಾಯತ್ರಿ ಕೆ.ಹೆಚ್. ತಿಳಿಸಿದ್ದಾರೆ.

## ಉಡುಪಿ ವಿಡಿಯೋ ಪ್ರಕರಣ : ಜಾಮೀನು

ಉಡುಪಿ, ಜು. 28 - ಇಲ್ಲಿನ ಕಾಲೇಜಿನ ಶೌಚಾಲಯದಲ್ಲಿ ವಿದ್ಯಾರ್ಥಿನಿಯ ವಿಡಿಯೋ ತೆಗೆದ ಆರೋಪ ಎದುರಿಸುತ್ತಿರುವ ಮೂವರು ವಿದ್ಯಾರ್ಥಿನಿಯರಿಗೆ ಸ್ಥಳೀಯ ನ್ಯಾಯಾಲಯ ಜಾಮೀನು ನೀಡಿದೆ. ಈ ಮೂವರ ವಿರುದ್ಧ ಮಲ್ಪೆ ಪೊಲೀಸ್ ಠಾಣೆಯಲ್ಲಿ ಜುಲೈ 25ರಂದು ಪ್ರಕರಣ ದಾಖಲಿಸಲಾಗಿತ್ತು.

## ಮಲೇಬೆನ್ನೂರು ಪುರಸಭೆಗೆ ಜಾಗ ನೀಡುವಂತೆ ನೀರಾವರಿ ಎಂಡಿಗೆ ಸಚಿವ ರಹೀಂಖಾನ್ ಸೂಚನೆ



ಮಲೇಬೆನ್ನೂರು, ಜು.28- ಮಲೇಬೆನ್ನೂರು ಪುರಸಭೆಗೆ ಅಗತ್ಯವಿರುವ ಜಾಗವನ್ನು ಕಾನೂನು ಪ್ರಕಾರ ನೀಡುವ ಬಗ್ಗೆ ಸಿಎಂಗೆ ಪತ್ರ ಬರೆಯಿರಿ, ನಂತರ ಅವರಿಂದ ಅನುಮತಿ ಕೊಡಿಸುತ್ತೇವೆ ಎಂದು ನೀರಾವರಿ ನಿಗಮದ ಎಂಡಿ ಅವರಿಗೆ ಪೌರಾಡಳಿತ ಮತ್ತು ಹಜ್ ಇಲಾಖೆ ಸಚಿವ ರಹೀಂ ಖಾನ್ ಅವರು ಸೂಚನೆ ನೀಡಿದ್ದಾರೆ ಎಂದು ಕಾಂಗ್ರೆಸ್ ಮುಖಂಡ ನಂದಿಗಾವಿ ಶ್ರೀನಿವಾಸ್ ತಿಳಿಸಿದರು.

ಶುಕ್ರವಾರ ಬೆಂಗಳೂರಿನಲ್ಲಿ ಸಚಿವರನ್ನು ಭೇಟಿ ಮಾಡಿದ ವೇಳೆ ಹರಿಹರ ವಿಧಾನಸಭಾ ಕ್ಷೇತ್ರಕ್ಕೆ ಅಮೃತ ಯೋಜನೆ ಅನುಷ್ಠಾನ ಮತ್ತು ಮಲೇಬೆನ್ನೂರಿನಲ್ಲಿ ಪುರಸಭೆಯ ನೂತನ ಕಛೇರಿಗಳ ಸಂಕೀರ್ಣಕ್ಕೆ ಬೇಕಾದ ಎರಡು ಎಕರೆ ಭೂಮಿಯನ್ನು ನೀರಾವರಿ ಇಲಾಖೆಯಿಂದ ಹಸ್ತಾಂತರ ಮಾಡುವ ವಿಚಾರವನ್ನು ಅವರ ಗಮನಕ್ಕೆ ತಂದಾಗ ಪೂರಕವಾಗಿ ಸ್ಪಂದಿಸಿದರು.

ಮಲೇಬೆನ್ನೂರು ಪಟ್ಟಣಕ್ಕೆ ಕುಡಿಯುವ ನೀರನ್ನು ಶೇಖರಣೆ ಮಾಡಲು ಓವರ್ ಹೆಡ್ ಟ್ಯಾಂಕ್ ನಿರ್ಮಿಸಲು ಜಾಗದ ಸಮಸ್ಯೆ ಇದೆ ಎಂದಾಗ, ತಕ್ಷಣ ಸಚಿವರು ನೀರಾವರಿ ನಿಗಮದ ವ್ಯವಸ್ಥಾಪಕ ನಿರ್ದೇಶಕರೊಂದಿಗೆ ದೂರವಾಣಿ ಮೂಲಕ ಮಾತನಾಡಿ, ತ್ವರಿತವಾಗಿ ಜಾಗ ನೀಡುವ ಬಗ್ಗೆ ಅಗತ್ಯ ಕ್ರಮಗಳನ್ನು ಕೈಗೊಳ್ಳುವಂತೆ ಹೇಳಿದರು.

ಹರಿಹರ ನಗರಸಭೆಗೆ ನಗರೋತ್ಥಾನ ಯೋಜನೆಯಲ್ಲಿ ತಡೆಹಿಡಿಯಲಾಗಿದ್ದ 8 ಕೋಟಿ ರೂ ಅನುದಾನದ ಬಗ್ಗೆ ಗಮನ ಸೆಳೆದಾಗ ಕೂಡಲೇ ಬಿಡುಗಡೆ ಮಾಡುವಂತೆ ದೂರವಾಣಿ ಮೂಲಕ ಸಂಬಂಧಪಟ್ಟ ಅಧಿಕಾರಿಗಳಿಗೆ ಸಚಿವ ರಹೀಮ್ ಖಾನ್ ಸೂಚಿಸಿದರೆಂದು ನಂದಿಗಾವಿ ಶ್ರೀನಿವಾಸ್ 'ಜನತಾವಾಣಿ' ಗೆ ಮಾಹಿತಿ ನೀಡಿದರು.

ಮಲೇಬೆನ್ನೂರಿನ ನೀರಾವರಿ ಇಲಾಖೆಯ ಆವರಣದಲ್ಲಿ ಪುರಸಭೆಗೆ 2 ಎಕರೆ ಜಾಗವನ್ನು ನೀಡುವಂತೆ ಈ ಹಿಂದಿನ ಅವಧಿಯಲ್ಲಿ ಅಂದಿನ ಪುರಸಭೆ ಅಧ್ಯಕ್ಷರಾಗಿದ್ದ ಅಂಜಿನಮ್ಮ ಆದಾಪುರ ವಿಜಯಕುಮಾರ್, ಉಪಾಧ್ಯಕ್ಷರಾಗಿದ್ದ ಬಿ.ಎಂ. ಚನ್ನೇಶ್ ಸ್ವಾಮಿ ಮತ್ತು ಸದಸ್ಯರ ಜೊತೆಗೆ ಅಂದು ಶಾಸಕರಾಗಿದ್ದ ಹೆಚ್.ಎಸ್. ಶಿವಶಂಕರ್ ಹಾಗೂ ಎಸ್. ರಾಮಪ್ಪ ಅವರೂ ಕೂಡಾ ಪ್ರಯತ್ನ ಪಟ್ಟಿದ್ದರು. ಅದಕ್ಕಾಗಿ ಧಾರವಾಡದಲ್ಲಿರುವ ವಾಲ್ಮಿ ಕಛೇರಿಗೆ ಮತ್ತು ಬೆಂಗಳೂರಿನಲ್ಲಿರುವ ನೀರಾವರಿ ನಿಗಮಕ್ಕೂ ಓಡಾಟ ಮಾಡಿದ್ದನ್ನು ಇಲ್ಲಿ ಸ್ಮರಿಸಬಹುದು.

## ನಗರದಲ್ಲಿ ಇಂದು 'ಉದಯ ರಾಗದಿಂದ ಸಂಧ್ಯಾರಾಗ' ಸಂಗೀತೋತ್ಸವ

ದಾವಣಗೆರೆ, ಜು. 28- ಗುರು ಪೂರ್ಣಿಮೆ ಅಂಗವಾಗಿ ಆರೋಹಿ ಸಂಗೀತ ಕಲಾ ಸಂಸ್ಥೆ ವತಿಯಿಂದ 'ಉದಯ ರಾಗದಿಂದ ಸಂಧ್ಯಾರಾಗ' ಸಂಗೀತೋತ್ಸವ ಹಾಗೂ ವಾರ್ಷಿಕ ಸಂಭ್ರಮ ಕಾರ್ಯಕ್ರಮವು ನಾಳೆ ದಿನಾಂಕ 29 ರಂದು ಬೆಳಿಗ್ಗೆ 9.30 ರಿಂದ ರಾತ್ರಿ 8 ರವರೆಗೆ ಕುವೆಂಪು ಕನ್ನಡ ಭವನದಲ್ಲಿ ನಡೆಯಲಿದೆ ಎಂದು ಸಂಸ್ಥೆಯ ಅಧ್ಯಕ್ಷ ಆನಂದ ಆರ್. ಪಾಟೀಲ್ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ಪದ್ಮಭೂಷಣ ಪಂಡಿತ್ ಡಾ. ಪುಟ್ಟರಾಜ ಗವಾಯಿಗಳವರಿಗೆ ಗುರು ನಮನ ಸಲ್ಲಿಸಲಾಗುವುದು. ಬಾಪೂಜಿ ವಿದ್ಯಾಸಂಸ್ಥೆ ಆಡಳಿತ ಮಂಡಳಿ ಸದಸ್ಯ ಸಂಪನ್ನ ಮುತಾಲಿಕ್ ಕಾರ್ಯಕ್ರಮ ಉದ್ಘಾಟಿಸುವರು. ವೀರೇಶ್ವರ ಪುಣ್ಯಾಶ್ರಮದ ಕಾರ್ಯದರ್ಶಿ ಎ.ಹೆಚ್. ಶಿವಮೂರ್ತಿಸ್ವಾಮಿ ಅಧ್ಯಕ್ಷತೆ ವಹಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ರವಿಚಂದ್ರ, ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಬಿ. ವಾಮದೇವಪ್ಪ ಮತ್ತಿತರೆ ಗಣ್ಯರು ಭಾಗವಹಿಸಲಿದ್ದಾರೆಂದು ತಿಳಿಸಿದರು.

ಇದೇ ವೇಳೆ ಡಾ. ಕೆ. ಮಹೇಶ್, ಡಾ.ಸವಿತಾ ಮಹೇಶ್, ತೆಲಿಗಿ ಶಿವಯೋಗಪ್ಪ, ರೇವಣಸಿದ್ಧಪ್ಪ ಇವರನ್ನು ಗೌರವಿಸಲಾಗುವುದು. ಸಂಸ್ಥೆಯ ಸುಮಾರು 80 ಮಕ್ಕಳು ಶಾಸ್ತ್ರೀಯ ಸಂಗೀತ, ವಚನ ಸಂಗೀತ, ದಾಸವಾಣಿ, ಭಾವಗೀತೆ, ತತ್ವಪದ, ಜನಪದ, ದೇಶಭಕ್ತಿ ಗೀತೆಗಳನ್ನು ಪ್ರಸ್ತುತಪಡಿಸಲಿದ್ದಾರೆ.

ಅಂದು ಸಂಜೆ 5 ಗಂಟೆಗೆ ಸಮಾರೋಪ ಸಮಾರಂಭ ನಡೆಯಲಿದ್ದು, ಲೆಕ್ಕಪರಿಶೋಧಕ ಅಥಣಿ ಎಸ್. ವೀರಣ್ಣ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಹಿರಿಯ ಪತ್ರಕರ್ತರಾದ ಬಿ.ಎನ್. ಮಲ್ಲೇಶ್, ಡಿ.ಆರ್.ನಟರಾಜ್ ಹಿರೇಮಳಲಿ, ಅಂತರರಾಷ್ಟ್ರೀಯ ಖ್ಯಾತಿಯ ಸಿತಾರ್ ವಾದಕ ಉಸ್ತಾದ್ ಶಫಿಕ್ ಖಾನ್ ಮತ್ತಿತರರು ಭಾಗವಹಿಸಲಿದ್ದಾರೆ.

ಇದೇ ವೇಳೆ ಜಾಲಿಮರದ ಕರಿಬಸಪ್ಪ, ಕಮಲ ಕಂದ ಅಂಬಣ್ಣ ಎಸ್. ಜಾಮದಾರ್, ಹೆಚ್.ಪಿ. ಸಾಗರ್ ಅವರನ್ನು ಗೌರವಿಸಲಾಗುವುದು ಎಂದರು.

ಅಮೋಘ ಎಂ.ಪವಾರ್ ಹಾಡಿರುವ 'ಅಮೋಘ ಗೀತ ಮಂಜರಿ' ವಚನ ಸಾಹಿತ್ಯ, ದೇಶ ಭಕ್ತಿಗೀತೆಗಳ ಧ್ವನಿ ಸುರುಳಿ ಬಿಡುಗಡೆ ಮಾಡಲಾಗುವುದು ಎಂದು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಸಂಗೀತ ಶಿಕ್ಷಕ ಶರಣಯ್ಯ ಗುಡ್ಡದಮಠ, ಸುರೇಶ್ ಕುಮಾರ್ ಕೊಪ್ಪಳ, ಕಾಂತರಾಜ್ ಚಾಮರಾಜನಗರ ಉಪಸ್ಥಿತರಿದ್ದರು.


## ಪುಣ್ಯಸ್ಮರಣೆ



ಜನನ : 29-07-1950

ನಿಧನ : 28-05-2006

**ದಿ|| ಶ್ರೀ ಶ್ಯಾಮರಾವ್ ಮ. ಕಲಾಲ್**

*ಇಂದು ನಿಮ್ಮ 74ನೇ ಹುಟ್ಟುಹಬ್ಬದ ಸವಿನೆನಪುಗಳೊಂದಿಗೆ, ನೀವು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ಸದಾ ಮುನ್ನಡೆಯುತ್ತಾ, ಸರ್ವದಾ ನಿಮ್ಮ ಆಶೀರ್ವಾದ ನಮ್ಮ ಮೇಲಿರಲಿ ಎಂದು ಪ್ರಾರ್ಥಿಸುತ್ತೇವೆ.*

**ಶ್ರೀ ವೆಂಕಟೇಶ್ವರ ಡಿಜಿಟಲ್ ಕಲರ್ ಲ್ಯಾಬ್ ಮತ್ತು ಸ್ಟುಡಿಯೋ**
ಪಿ.ಬಿ. ರೋಡ್, ಗಾಂಧಿ ಸರ್ಕಲ್ ಹತ್ತಿರ, ದಾವಣಗೆರೆ. ಹಾಗೂ
**ಶ್ರೀ ಮಾರುತಿ ಕಲರ್ ಲ್ಯಾಬ್,** ದಾವಣಗೆರೆ-ಹುಬ್ಬಳ್ಳಿ

## 18ನೇ ವರ್ಷದ ಪುಣ್ಯಸ್ಮರಣೆ



**ದಿ|| ಬೆನ್ನೂರು ಮರುಳಪ್ಪನವರು,** ಆನೆಕೊಂಡ

ನೀವು ನಮ್ಮನ್ನಗಲಿ ಇಂದಿಗೆ ಹದಿನೆಂಟು ವರ್ಷಗಳು ಕಳೆದವು.
ಸದಾ ನಿಮ್ಮ ಸ್ಮರಣೆಯಲ್ಲಿರುವ,
**ಪತ್ನಿ : ಗೌರಮ್ಮ ಬೆನ್ನೂರು ಮರುಳಪ್ಪ ಮತ್ತು ಮಕ್ಕಳು,
ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಮರಿಮೊಮ್ಮಕ್ಕಳು,
ಸಹೋದರರು ಹಾಗೂ ಬೆನ್ನೂರು ವಂಶಸ್ಥರು,** ಆನೆಕೊಂಡ.
**ಮೆ|| ಬೆನ್ನೂರು ಬಸಪ್ಪ ಪೂಹಾ ಮಿಲ್,** ದಾವಣಗೆರೆ.
**ಮೆ|| ಬೆನ್ನೂರು ಬಸಪ್ಪ ಇಂಡಸ್ಟ್ರೀಸ್,** ದಾವಣಗೆರೆ.
**ಮೆ|| ಬಿ.ಬಿ. ಎಂಟರ್‌ಪ್ರೈಸಸ್,** ದಾವಣಗೆರೆ.
**ಎ.ಬಿ.ಆರ್. ಎಂಟರ್ ಪ್ರೈಸಸ್,** ದಾವಣಗೆರೆ.


**ಬಣಕಾರ್ ಶ್ರೀಮತಿ ಸಾವಕ್ಕ ನಿಧನ**



ವಿಜಯನಗರ ಜಿಲ್ಲೆ, ಹರಪನಹಳ್ಳಿ ತಾಲ್ಲೂಕು ಸತ್ತೂರು ಗ್ರಾಮದ ವಾಸಿ ಬಣಕಾರ್ ಶ್ರೀಮತಿ ಸಾವಕ್ಕ ಇವರು ದಿನಾಂಕ 28.07.2023ರ ಶುಕ್ರವಾರ ಮಧ್ಯಾಹ್ನ 1.45ಕ್ಕೆ ನಿಧನರಾದರು. ಮೂವರು ಪುತ್ರರು, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 29.07.2023ರ ಶನಿವಾರ ಮಧ್ಯಾಹ್ನ 12 ಗಂಟೆಗೆ ಹರಪನಹಳ್ಳಿ ತಾಲ್ಲೂಕು ಸತ್ತೂರು ಗ್ರಾಮದಲ್ಲಿ ನೆರವೇರಲಿದೆ.

**ನೇತ್ರ ದಾನ ಶ್ರೇಷ್ಠ ದಾನ**

## ತಹಶೀಲ್ದಾರ್ ಸೇರಿದಂತೆ ಅಧಿಕಾರಿಗಳ ವರ್ಗಾವಣೆ

**ಶಾಸಕರ ಅಪೇಕ್ಷೆಯಂತೆ ಬದಲಾವಣೆ**

ಬೆಂಗಳೂರು, ಜು. 28 - ಸ್ವಪಕ್ಷದ ಶಾಸಕರ ಒತ್ತಡಕ್ಕೆ ಮಣಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ತಹಶೀಲ್ದಾರ್ ಸೇರಿದಂತೆ, ವಿವಿಧ ಇಲಾಖೆಯ ಅಧಿಕಾರಿಗಳು ಮತ್ತು ನೌಕರರನ್ನು ವರ್ಗಾವಣೆ ಮಾಡಲು ಚಾಲನೆ ನೀಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಸಾಮಾನ್ಯ ವರ್ಗಾವಣೆ ಅವಧಿ ಮುಗಿದಿರುವುದರಿಂದ ಸಂಬಂಧಪಟ್ಟ ಇಲಾಖೆ ಸಚಿವರಿಗೆ ವರ್ಗಾವಣೆ ಮಾಡುವ ಅಧಿಕಾರವಿಲ್ಲ. ಆದರೆ, ತಮ್ಮ ಶಾಸಕರು ತಮ್ಮ ಕ್ಷೇತ್ರದ ವ್ಯಾಪ್ತಿಗೆ ಅಧಿಕಾರಿಗಳ ವರ್ಗಾವಣೆಯ ಮಹಾಪೂರದ ಪಟ್ಟಿಯನ್ನೇ ನೀಡಿದ್ದಾರೆ. ಗೃಹ, ಕಂದಾಯ, ಗ್ರಾಮೀಣಾಭಿವೃದ್ಧಿ ಸೇರಿದಂತೆ ಜನರಿಗೆ ಹತ್ತಿರವಾಗಿರುವ ಇಲಾಖೆಗಳ ಅಧಿಕಾರಿ, ನೌಕರರನ್ನು ಶಾಸಕರ ಅಪೇಕ್ಷೆಯಂತೆ ನಿಯೋಜನೆ ಇಲ್ಲವೇ ಬದಲಾವಣೆ ಮಾಡುವ ತೀರ್ಮಾನ ಕೈಗೊಂಡಿದ್ದಾರೆ.

ಇದಕ್ಕೆ ಪೂರಕವಾಗಿ 87 ತಹಶೀಲ್ದಾರ್ ಹಾಗೂ ಠಾಣಾಧಿಕಾರಿಗಳ ವರ್ಗಾವಣೆಗೆ ಚಾಲನೆ ನೀಡಿದ್ದಾರೆ. ನಾಳೆ ಮೊಹರಂ ಹಬ್ಬದ ರಜೆ ಕಳೆದ ನಂತರ ಐಎಎಸ್, ಐಪಿಎಸ್ ಅಧಿಕಾರಿಗಳನ್ನು ದೊಡ್ಡ ಪ್ರಮಾಣದಲ್ಲಿ ವರ್ಗಾವಣೆ ಮಾಡಲಾಗುತ್ತದೆ ಎಂದು ಉನ್ನತ ಮೂಲಗಳು ತಿಳಿಸಿವೆ.

## ಟಾಪ್ ಕ್ಲಾಸ್ ವಿದ್ಯಾರ್ಥಿ ವೇತನಕ್ಕೆ ಅರ್ಜಿ

ದಾವಣಗೆರೆ, ಜು. 28 - ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಇಲಾಖೆಯಿಂದ 2022-23ನೇ ಸಾಲಿನ ಕೇಂದ್ರ ಪುರಸ್ಕೃತ ಟಾಪ್ ಕ್ಲಾಸ್ ವಿದ್ಯಾರ್ಥಿವೇತನ ಪಡೆಯಲು ಟಾಪ್ ಸ್ಕೂಲ್ ಸಂಸ್ಥೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಅರ್ಹ ವಿದ್ಯಾರ್ಥಿಗಳು ಆಗಸ್ಟ್ 10 ರೊಳಗಾಗಿ ನ್ಯಾಷನಲ್ ಸ್ಕಾಲರ್ ಶಿಪ್ ಪೋರ್ಟಲ್ ಮೂಲಕ ಅರ್ಜಿ ಸಲ್ಲಿಸಬೇಕು ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಜಿಲ್ಲಾ ಅಧಿಕಾರಿ ಗಾಯತ್ರಿ ಕೆ.ಹೆಚ್. ತಿಳಿಸಿದ್ದಾರೆ.

KA/SK/CTA-275/2021-2023. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas

# ಪಿಟಿಸಿಎಲ್ ಭೂ ವಂಚಿತರ ಹೋರಾಟ ಅಂತ್ಯ

## ಸಚಿವ ಮಹದೇವಪ್ಪ ಆದೇಶ ಪತ್ರ ನೀಡಿದ ನಂತರ ಪ್ರತಿಭಟನೆಗೆ ತೆರೆ

ಬೆಂಗಳೂರು, ಜು. 28 - ಪರಿಶಿಷ್ಟರ ಭೂ ವರ್ಗಾವಣೆ ನಿಷೇಧ (ಪಿಟಿಸಿಎಲ್) ಕಾಯ್ದೆ ತಿದ್ದುಪಡಿಗಾಗಿ 208 ದಿನಗಳಿಂದ ನಡೆಸುತ್ತಿದ್ದ ಎಸ್.ಸಿ, ಎಸ್.ಟಿ ಪಿಟಿಸಿಎಲ್ ಕಾಯ್ದೆ ಭೂಮಿ ವಂಚಿತರ ಹೋರಾಟಕ್ಕೆ ಕೊನೆಗೂ ಗೆಲುವು ದಕ್ಕಿದೆ. ಅಹೋರಾತ್ರಿ ಹೋರಾಟ ನಡೆಸುತ್ತಿರುವವರಿಗೆ ಸಮಾಜ ಕಲ್ಯಾಣ ಸಚಿವ ಡಾ. ಹೆಚ್.ಸಿ. ಮಹದೇವಪ್ಪ ಆದೇಶ ಪತ್ರ ನೀಡಿದ ಹಿನ್ನೆಲೆಯಲ್ಲಿ ಹೋರಾಟಗಾರರು ಪ್ರತಿಭಟನೆ ಕೈಬಿಟ್ಟಿದ್ದಾರೆ.

ನಗರದ ಫ್ರೀಡಂ ಪಾರ್ಕ್‌ನಲ್ಲಿ ಪ್ರತಿಭಟನಾಕಾರರನ್ನು ಭೇಟಿಯಾದ ಸಚಿವ ಮಹದೇವಪ್ಪ, ಸರ್ಕಾರ ದಲಿತ ಸಮುದಾಯದ ಹಿತ ರಕ್ಷಣೆಗೆ ಬದ್ಧವಾಗಿದ್ದು, ವಿಶೇಷವಾಗಿ ಭೂಮಿ ರಕ್ಷಣೆಗೆ ಅಗತ್ಯವಿರುವ ಎಲ್ಲಾ ರೀತಿಯ ಕ್ರಮಗಳನ್ನು ಕೈಗೊಳ್ಳಲಿದೆ. ಮೊದಲ ಹಂತದಲ್ಲಿ ಪಿಟಿಸಿಎಲ್ ಕಾಯ್ದೆಗೆ ತಿದ್ದುಪಡಿ ತರಲು ಸಚಿವ ಸಂಪುಟ ಸಭೆ ಯಲ್ಲಿ ನಿರ್ಧಾರ ಕೈಗೊಳ್ಳಲಾಗಿದೆ ಎಂದರು.

ಸರ್ಕಾರ ಕೊಟ್ಟ ಮಾತಿನಂತೆ ನುಡಿದಂತೆ ನಡೆದಿದೆ. ಶತಶತಮಾನ ಗಳಿಂದ ಶೋಷಣೆಗೆ ಒಳಗಾದವರಿಗೆ ಮರು ಬದುಕು ಕಟ್ಟಿಕೊಳ್ಳಲು ಐತಿಹಾಸಿಕ ನಿರ್ಧಾರ ತೆಗೆದುಕೊಂಡಿದೆ. 2017 ರಲ್ಲಿ ಸರ್ವೋಚ್ಚ ನ್ಯಾಯಾಲಯ ನೆಕ್ಕಂಟಿ ರಾಮಲಕ್ಷ್ಮಿ ಹಾಗೂ ಕರ್ನಾಟಕ ಸರ್ಕಾರ ಪ್ರಕರಣದಲ್ಲಿ ನೀಡಿದ ತೀರ್ಪಿನಿಂದ ಲಕ್ಷಾಂತರ ಕುಟುಂಬಗಳ ಭೂಮಿ ಕೈ ತಪ್ಪಿದರಿಂದ ಇಡೀ ಸಮುದಾಯ ಭೂಮಿಗಳನ್ನು ಕಳೆದುಕೊಂಡು ಬೀದಿ ಪಾಲಾಗಿ ತಮ್ಮ ಜೀವನವನ್ನೇ ಕಳೆದುಕೊಂಡಿದ್ದರು. 6 ವರ್ಷಗಳ ಹೋರಾಟಕ್ಕೆ ಜಯ ಸಿಕ್ಕಿದೆ. ಬಿಜೆಪಿ ಸುಳ್ಳು ಭರವಸೆಗಳನ್ನು ನೀಡಿ ಸಮುದಾಯವನ್ನು ದಾರಿ ತಪ್ಪಿಸಿತ್ತು ಎಂದು ಮೈಸೂರಿನ ಉರಿಲಿಂಗ ಪೆದ್ದಿ ಮಹಾ ಸಂಸ್ಥಾನ ಮಠದ ಜ್ಞಾನ ಪ್ರಕಾಶ್ ಸ್ವಾಮೀಜಿ ತಿಳಿಸಿದರು.

ಹೋರಾಟ ಸಮಿತಿ ಮುಖ್ಯಸ್ಥ ಮಂಜುನಾಥ್ ಮಾತನಾಡಿ, ಚಿತ್ರದುರ್ಗದಲ್ಲಿ ನಾವು ಹೋರಾಟ ಆರಂಭಿಸಿದ ಸಂದರ್ಭದಲ್ಲಿ ವಿರೋಧ ಪಕ್ಷದ ನಾಯಕರಾಗಿದ್ದ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷರಾಗಿದ್ದ ಡಿ.ಕೆ. ಶಿವಕುಮಾರ್, ಹೆಚ್.ಸಿ. ಮಹದೇವಪ್ಪ, ಸತೀಶ್ ಜಾರಕಿಹೊಳಿ ಸೇರಿದಂತೆ, ಹಲವು ಮುಖಂಡರು ನೀಡಿದ್ದ ಭರವಸೆ ಇದೀಗ ಈಡೇರಿದೆ. ಕಾಂಗ್ರೆಸ್ ಸರ್ಕಾರ ನಮಗೆ ಶಾಶ್ವತ ಆರ್ಥಿಕ ಮತ್ತು ಸಾಮಾಜಿಕ ಭದ್ರತೆ ಒದಗಿಸಿದೆ ಎಂದರು.

# ತಾಲ್ಲೂಕುವಾರು ಇಲಾಖೆಗಳಿಗೆ ಶ್ರೇಣಿ ವ್ಯವಸ್ಥೆ

## ಸಾಧನೆ ಕಳಪೆಯಾದರೆ ಶಿಸ್ತು ಕ್ರಮ : ಜಿಲ್ಲಾಧಿಕಾರಿ ಡಾ.ಎಂ.ವಿ. ವೆಂಕಟೇಶ್



ದಾವಣಗೆರೆ, ಜು. 28 - ತಾಲ್ಲೂಕು ಮಟ್ಟದಲ್ಲಿ ವಿವಿಧ ಇಲಾಖೆಗಳು ಯಾವ ರೀತಿ ಕೆಲಸ ಮಾಡುತ್ತಿವೆ ಎಂಬುದರ ಬಗ್ಗೆ ನಿಗಾ ವಹಿಸಿ ಗ್ರೇಡಿಂಗ್ (ಶ್ರೇಣಿ) ರೂಪಿಸಲಾಗುವುದು. ಸಾಧನೆ ಕಳಪೆಯಾದರೆ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ತೆಗೆದುಕೊಳ್ಳಲಾಗುವುದು ಎಂದು ಜಿಲ್ಲಾಧಿಕಾರಿ ಎಂ.ವಿ. ವೆಂಕಟೇಶ್ ತಿಳಿಸಿದ್ದಾರೆ.

ತಮ್ಮ ಕಚೇರಿಯಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅಧಿಕಾರಿಗಳು ಜನಪರವಾಗಿ ಹಾಗೂ ತ್ವರಿತವಾಗಿ ಕೆಲಸ ಮಾಡಬೇಕು. ಜನರೊಂದಿಗೆ ಸೌಜನ್ಯದಿಂದ ವರ್ತಿಸಬೇಕು. ಕಾರ್ಯಕ್ಷೇತ್ರಗಳಿಗೆ ಭೇಟಿ ನೀಡಿ ಸಮಸ್ಯೆ ಅರಿತು ಕಾರ್ಯ ನಿರ್ವಹಿಸಬೇಕು ಎಂದು ಸೂಚನೆ ನೀಡಲಾಗಿದೆ. ತಾಲ್ಲೂಕುಗಳ ಕಾರ್ಯ ನಿರ್ವಹಣೆ ಕುರಿತು ತಿಳಿಯಲು ಪ್ರತಿ ತಿಂಗಳು ಕಂದಾಯ ಅಧಿಕಾರಿಗಳ ಸಭೆ ಮಾಡಲಾಗುವುದು ಎಂದು ಹೇಳಿದರು. ಅನ್ನ ಭಾಗ್ಯ ಯೋಜನೆಯಡಿ ಬಿ.ಪಿ.ಎಲ್. ಪಡಿತರದಾರರಿಗೆ ನೀಡಲಾಗುತ್ತಿರುವ ಹಣ ತೊಡಕುಗಳಿಂದಾಗಿ ಈ ತಿಂಗಳು ಸಿಗದೇ ಇದ್ದರೆ, ಮುಂದಿನ ತಿಂಗಳು ನೀಡಲು ಯೋಜನೆ ಇದೆ ಎಂದು ಜಿಲ್ಲಾಧಿಕಾರಿ ವೆಂಕಟೇಶ್ ತಿಳಿಸಿದರು.

ಆಧಾರ್ ಜೋಡಣೆ ಸೇರಿದಂತೆ ಹಲವಾರು ಕಾರಣಗಳಿಂದಾಗಿ ಜಿಲ್ಲೆಯ 40 ಸಾವಿರ ಪಡಿತರದಾರರ ಖಾತೆಗಳಿಗೆ ಹಣ ಜಮಾ ಆಗಿರಲಿಲ್ಲ. ಈ ತೊಡಕುಗಳನ್ನು ಬಗೆಹರಿಸಲು ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ ಎಂದವರು ಹೇಳಿದರು.

ಮಳೆ ಕಾರಣದಿಂದಾಗಿ ಆಗಬಹುದಾದ ಅನಾಹುತಗಳ ತಡೆಗೆ ಮುನ್ನೆಚ್ಚರಿಕಾ ಕ್ರಮಕ್ಕೆ ಸೂಚನೆಗಳನ್ನು ನೀಡಲಾಗಿದೆ. ಮಳೆ ಕಾರಣದಿಂದ ಸಾವು ಸಂಭವಿಸಿದರೆ ಇಲ್ಲವೇ ಮನೆ ಕುಸಿದರೆ 24 ಗಂಟೆಗಳ ಒಳಗೆ ಪರಿಹಾರ ತಲುಪಿಸಲು ಕ್ರಮ ತೆಗೆದು ಕೊಳ್ಳಲಾಗುವುದು ಎಂದು ಜಿಲ್ಲಾಧಿಕಾರಿ ಹೇಳಿದರು.

51 ಅಂಗನವಾಡಿ ಹಾಗೂ 11 ಶಾಲೆಗಳು ಮಳೆಯಿಂದ ಸೋರುತ್ತಿರುವುದು ಕಂಡು ಬಂದಿದೆ. ಈ ರೀತಿಯ ಸಮಸ್ಯೆ ಇರುವ ಶಾಲಾ ಕಟ್ಟಡಗಳನ್ನು ಗುರುತಿಸಿ ಪರ್ಯಾಯ ಯೋಜನೆ ರೂಪಿಸುವಂತೆ ಸೂಚನೆ ನೀಡಲಾಗಿದೆ ಎಂದವರು ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಅಪರ ಜಿಲ್ಲಾಧಿಕಾರಿ ಪಿ. ಎನ್. ಲೋಕೇಶ್ ಉಪಸ್ಥಿತರಿದ್ದರು.

### ಜಿಲ್ಲೆಯಲ್ಲಿ ಶೇ.55ರಷ್ಟು ಬಿತ್ತನೆ

**ಜಿಲ್ಲೆಯಲ್ಲಿ ಇದುವರೆಗೂ ಶೇ.22ರಷ್ಟು ಹೆಚ್ಚುವರಿ ಮಳೆಯಾಗಿದೆ. ಮುಂಗಾರು ಹಂಗಾಮಿನಲ್ಲಿ 2.45 ಲಕ್ಷ ಹೆಕ್ಟೇರ್ ಬಿತ್ತನೆ ಗುರಿಯಲ್ಲಿ ಶೇ. 55 ರಷ್ಟು ಬಿತ್ತನೆಯಾಗಿದೆ ಎಂದು ಜಿಲ್ಲಾಧಿಕಾರಿ ಎಂ.ವಿ. ವೆಂಕಟೇಶ್ ತಿಳಿಸಿದ್ದಾರೆ. ಭದ್ರಾ ಜಲಾಶಯದಲ್ಲಿ ಪ್ರಸ್ತುತ 159.1 ಅಡಿ ನೀರಿದ್ದು ಇದು 163 ಅಡಿಗೆ ಏರಿಕೆಯಾದ ತಕ್ಷಣ ಬೆಳೆಗಳಿಗೆ ನೀರು ಬಿಡಲಾಗುತ್ತದೆ. ಈ ಬಗ್ಗೆ ಪ್ರಾದೇಶಿಕ ಆಯುಕ್ತರ ಅಧ್ಯಕ್ಷತೆಯಲ್ಲಿ ನಡೆಯುವ ಸಭೆಯಲ್ಲಿ ನಿರ್ಣಯಿಸಲಾಗುತ್ತದೆ ಎಂದವರು ಹೇಳಿದರು. ಜುಲೈನಲ್ಲಿ 29480 ಮೆ.ಟನ್ ರಸಗೊಬ್ಬರ ಬೇಡಿಕೆ ಇದ್ದು, 44563 ಮೆ.ಟನ್ ಗೊಬ್ಬರ ದಾಸ್ತಾನಿದೆ. ಇದುವರೆಗೂ 43218 ಕ್ವಿಂಟಾಲ್ ಬಿತ್ತನೆ ಬೀಜ ವಿತರಣೆ ಮಾಡಿದ್ದು, 10444 ಕ್ವಿಂಟಾಲ್ ಬಿತ್ತನೆ ಬೀಜ ದಾಸ್ತಾನಿರುತ್ತದೆ ಎಂದರು.**

### ಶಾಲೆ, ಸ್ಮಶಾನಗಳಿಗೆ ಜಾಗ ನೀಡಲು ಆದ್ಯತೆ

**ಪ್ರತಿ ಗ್ರಾಮಗಳಲ್ಲಿ ಲಭ್ಯವಿರುವ ಸರ್ಕಾರಿ ಜಾಗಗಳನ್ನು ಗುರುತಿಸಿ ಅದನ್ನು ಶಾಲೆ, ಆಸ್ಪತ್ರೆ, ಅಂಗನವಾಡಿ ಹಾಗೂ ಸ್ಮಶಾನಗಳಿಗೆ ನೀಡಲು ಕ್ರಮ ತೆಗೆದುಕೊಳ್ಳಲಾಗುವುದು. ಎಲ್ಲ ಗ್ರಾಮಗಳಲ್ಲೂ ಸ್ಮಶಾನದ ವ್ಯವಸ್ಥೆ ಕಲ್ಪಿಸಲು ಆದ್ಯತೆ ನೀಡಲಾಗುವುದು ಎಂದು ಜಿಲ್ಲಾಧಿಕಾರಿ ಎಂ.ವಿ. ವೆಂಕಟೇಶ್ ತಿಳಿಸಿದ್ದಾರೆ.**

**ಜಿಲ್ಲೆಯಲ್ಲಿ ಚಾನಲ್ ಜಾಗಗಳು ಒತ್ತುವರಿಯಾದ 9 ಸಾವಿರ ಸರ್ವೇ ನಂಬರ್‌ಗಳಿವೆ. ಸರ್ಕಾರ ಚಾನಲ್ ಜಾಗ ಪಡೆದುಕೊಂಡರೂ ಆರ್.ಟಿ.ಸಿ. ಯಲ್ಲಿ ಇಂಡೀಕರಣ ಆಗಿಲ್ಲ. ಈ ಬಗ್ಗೆ ಮೊದಲು ಕ್ರಮ ತೆಗೆದುಕೊಳ್ಳಲಾಗು ವುದು. ನಂತರದಲ್ಲಿ ಕೆರೆ, ಸರ್ಕಾರಿ ಜಮೀನು ಹಾಗೂ ಅರಣ್ಯ ಜಮೀನು ಒತ್ತುವರಿಗಳ ವಿರುದ್ಧ ಕ್ರಮ ತೆಗೆದು ಕೊಳ್ಳಲಾಗುವುದು ಎಂದವರು ತಿಳಿಸಿದರು.**

**ಪ್ರತಿ ಗ್ರಾಮದಲ್ಲೂ ನಿವೇಶನ ಹಾಗೂ ಮನೆ ಇಲ್ಲದವರಿಗೆ ಕಂದಾಯ ಜಮೀನಿನಲ್ಲಿ ಅವಕಾಶ ಕಲ್ಪಿಸಲಾಗುವುದು. ಜಮೀನು ಲಭ್ಯವಿರದೇ ಇದ್ದರೆ ಖಾಸಗಿಯವ ರಿಂದಲಾದರೂ ಖರೀದಿಸಲಾಗುವುದು ಎಂದು ಜಿಲ್ಲಾಧಿಕಾರಿ ಹೇಳಿದರು.**

# ನೈಸ್ ವರದಿ : ಟಿ.ಬಿ. ಜಯಚಂದ್ರ ಅವರಿಗೆ ಜೀವ ಬೆದರಿಕೆ ಕರೆ

ಬೆಂಗಳೂರು, ಜು.28 - ಕಾಂಗ್ರೆಸ್ ನ ಹಿರಿಯ ನಾಯಕ ಹಾಗೂ ರಾಜ್ಯ ಸರ್ಕಾರದ ನವದೆಹಲಿ ಪ್ರತಿನಿಧಿ ಟಿ.ಬಿ. ಜಯಚಂದ್ರ ಅವರಿಗೆ ನೈಸ್ ಸಂಬಂಧಿತ ಭೂ ಮಾಫಿಯಾದಿಂದ ಜೀವ ಬೆದರಿಕೆಗಳು ಬಂದಿವೆ.

ಟಿ.ಬಿ. ಜಯಚಂದ್ರ ಅಧ್ಯಕ್ಷತೆಯ ಸದನ ಸಮಿತಿ ನೀಡಿರುವ ನೈಸ್ ಹಗರಣ ಕುರಿತ ವರದಿ ರಾಜಕೀಯವಾಗಿ ಭಾರೀ ಸಂಚಲನ ಮೂಡಿಸಿ ರುವ ಬೆನ್ನಲ್ಲೇ ಬೆದರಿಕೆ ಕರೆಗಳು ಬಂದಿವೆ.

ಒಂದು ಲಕ್ಷ ಕೋಟಿ ರೂ.ಗೂ ಅಧಿಕ ಮೊತ್ತದ ಅವ್ಯವಹಾರವಾಗಿರುವ ಆರೋಪವಿದ್ದು, ಈ ಹಗರಣದಲ್ಲಿ ಸಾಕಷ್ಟು ಹಣದ ವ್ಯವಹಾರ ನಡೆದಿದೆ. 20 ಸಾವಿರ ಎಕರೆ ಭೂಮಿ ದುರುಪ ಯೋಗ ಆಗಿದೆ ಎಂಬ ವಿಚಾರ ಪ್ರಸ್ತಾಪವಾಗಿದೆ.

ವರದಿ ಕುರಿತಂತೆ ಹೆಚ್ಚಿನ ಚರ್ಚೆಯಾದ ಬಳಿಕ ನಿಮಗ್ಯಾಕೆ ಬೇಕಿತ್ತು ಅಂತ ನನಗೆ ಕಾಲ್‌ಗಳು ಬರುತ್ತಿವೆ ಎಂದು ಜಯಚಂದ್ರ ಅವರು ಹೇಳಿದ್ದಾರೆ.

ನಮ್ಮ ಪಿಎ, ಗನ್‌ಮ್ಯಾನ್ ಫೋನ್‌ಗಳಿಗೂ ಜೀವ ಬೆದರಿಕೆ ಬಂದಿವೆ. ಆದರೂ, ಇದ್ಯಾವುದಕ್ಕೂ ನಾನು ಹೆದರುವುದಿಲ್ಲ. ಬೆದರಿಕೆ ಕರೆ ಸಂಬಂಧ ನಮ್ಮ ಕಛೇರಿಯಿಂದ ಪೊಲೀಸ್ ಆಯುಕ್ತರಿಗೆ ದೂರು ನೀಡಲಾಗಿದೆ.

ಸಿಬಿಐ ತನಿಖೆಯ ಜೊತೆಗೆ ತ್ರಿಸದಸ್ಯ ಸಮಿತಿ ರಚಿಸಿಬೇಕೆಂದು ವರದಿಯಲ್ಲಿ ಉಲ್ಲೇಖಿಸ ಲಾಗಿದೆ. ನಾನು ನಿಷ್ಪಕ್ಷಪಾತ, ರಾಗ ದ್ವೇಷ ಇಲ್ಲದೆ ವರದಿ ಕೊಟ್ಟಿದ್ದೇನೆ. ಈವರೆಗೂ ವರದಿಯ ಇಂಗ್ಲಿಷ್ ಕಾಪಿಯನ್ನು ಸರ್ಕಾರ ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿಲ್ಲ. ನನಗೆ ಯಾರ್ಯಾರು ಭಾಗಿಯಾಗಿದ್ದಾರೆ ಎನ್ನುವುದಕ್ಕಿಂತ ಇಷ್ಟೊಂದು ದೊಡ್ಡ ಮೊತ್ತದ ಹಗರಣದ ಬಗ್ಗೆ ತನಿಖೆ ಆಗಬೇಕು. ಭೂಮಿ ಕಳೆದುಕೊಂಡ ರೈತರಿಗೆ ನ್ಯಾಯ ಸಿಗಬೇಕು ಎಂಬುದಾಗಿದೆ ಎಂದು ಅವರು ಹೇಳಿದ್ದಾರೆ.

ಬೆಂಗಳೂರಿನ ಸಂಜಯ ನಗರ ಪೊಲೀಸ್ ಠಾಣೆಗೆ ಅವರ ವಿಶೇಷ ಕರ್ತವ್ಯಾಧಿಕಾರಿ ಈ ಸಂಬಂಧ ದೂರು ನೀಡಿದ್ದಾರೆ. ದೂರಿನಲ್ಲಿ ಅಜ್ಞಾತ ವ್ಯಕ್ತಿಗಳಿಂದ ದೂರವಾಣಿ ಮೂಲಕ ಸರ್ಕಾರದ ನವದೆಹಲಿ ಪ್ರತಿನಿಧಿ ಮತ್ತು ಶಾಸಕ ಟಿ.ಬಿ.ಜಯಚಂದ್ರ ಅವರಿಗೆ ಪ್ರಾಣ ಬೆದರಿಕೆ ಕರೆಗಳು ಬರುತ್ತಿವೆ ಎಂದು ಉಲ್ಲೇಖಿಸಲಾಗಿದೆ.

ಈ ಹಿಂದೆ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರಾಗಿದ್ದ ಸಂದರ್ಭದಲ್ಲಿ ಬೆಂಗಳೂರು ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ (ಬಿ.ಎಂ.ಐ.ಸಿ) ಕಾಮಗಾರಿಯನ್ನು ನಿರ್ವಹಿಸಿದ ನೈಸ್ ಸಂಸ್ಥೆಯ ಹಗರಣಕ್ಕೆ ಸಂಬಂಧಿಸಿದಂತೆ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದ್ದರು.

ಆ ವರದಿಯನ್ನು ಅನುಷ್ಠಾನಗೊಳಿಸಲು ಇತ್ತೀಚೆಗೆ ನಡೆದ ವಿಧಾನಸಭೆ ಅಧಿವೇಶನದಲ್ಲಿ ವಿಷಯವನ್ನು ಪ್ರಸ್ತಾಪಿಸಿರುತ್ತಾರೆ. ತದನಂತರ ಈ ವಿಷಯ ಕುರಿತು ಅಜ್ಞಾತ ವ್ಯಕ್ತಿಗಳು ಕರೆ ಮಾಡಿ ಅವಾಚ್ಯ ಶಬ್ದಗಳನ್ನು ಬಳಸಿ ಜೀವ ಬೆದರಿಕೆ ಹಾಕುತ್ತಿದ್ದಾರೆ. ಆ ವ್ಯಕ್ತಿಗಳು ವಿವಿಧ ಮೊಬೈಲ್ ಸಂಖ್ಯೆಗಳನ್ನು ಬಳಸಿ ಕರೆ ಮಾಡುತ್ತಿದ್ದು, ಸದರಿ ನಂಬರ್‌ಗಳನ್ನು ಬರೆದು ಕೊಳ್ಳಲು ಸಾಧ್ಯವಾಗಿರು ವುದಿಲ್ಲ ಎಂದು ದೂರಿನಲ್ಲಿ ಪ್ರಸ್ತಾಪಿಸಲಾಗಿದೆ.

ಜತೆಗೆ ಸೂಕ್ತ ಭದ್ರತೆ ನೀಡುವಂತೆ ಕೋರಲಾಗಿದೆ. ದೂರಿನ ಪ್ರತಿಯನ್ನು ನಗರ ಪೊಲೀಸ್ ಆಯುಕ್ತರಿಗೂ ಸಲ್ಲಿಸಲಾಗಿದೆ.

### ರಾಜ್ಯ ವೀರಗಾಸೆ ಸ್ಪರ್ಧೆ

ಸಿರಿಗೆರೆ, ಜು.28- ಇಲ್ಲಿನ ಅಣ್ಣನ ಬಳಗ, ಶ್ರೀ ತರಳಬಾಳು ಬೃಹನ್ಮಠ ವತಿಯಿಂದ ಶ್ರೀ ಗುರುರಾಜ ದೇಶಿಕೇಂದ್ರ ಮಹಾಸ್ವಾಮಿ ಗಳವರ 85ನೇ ಶ್ರದ್ಧಾಂಜಲಿ ಕಾರ್ಯಕ್ರಮದ ಅಂಗವಾಗಿ ಆಗಸ್ಟ್ 10 ಮತ್ತು 11ರಂದು ರಾಜ್ಯ ಮಟ್ಟದ ವೀರಗಾಸೆ ಸ್ಪರ್ಧೆ ಏರ್ಪಡಿಸಲಾಗಿದೆ. ಸ್ಪರ್ಧೆಗಳು ಸಿರಿಗೆರೆಯ ಶ್ರೀಗುರು ಶಾಂತೇಶ್ವರ ದಾಸೋಹ ಮಂಟಪ ದಲ್ಲಿ ಜರುಗಲಿವೆ. ಅರ್ಜಿ ಸಲ್ಲಿಸಲು ಆ. 7 ಕೊನೆಯ ದಿನವಾಗಿರುತ್ತದೆ. ಭಾಗವಹಿಸಲಿ ಚ್ಚಿಸುವ ತಂಡಗಳು, ಅಧ್ಯಕ್ಷರು, ಅಣ್ಣನ ಬಳಗ, ಸಿರಿಗೆರೆ-577541 ಇಲ್ಲಿ ಹೆಸರು ನೋಂದಾ ಯಿಸಿಕೊಳ್ಳಬೇಕು. ವಿವರಕ್ಕೆ ಸಂಪರ್ಕಿಸಿ : 9986191968, 8861647555 ಈ ನಂಬರಿನ ವಾಟ್ಸಾಪ್‌ನಲ್ಲಿಯೂ ಹೆಸರು ನೋಂದಾಯಿಸಿಕೊಳ್ಳಬಹುದು.

# ವಿಮಾನದ ಬಾಗಿಲಲ್ಲೇ ರಾಜ್ಯಪಾಲರ ನಿಲ್ಲಿಸಿ ಅವಮಾನ

## ಕ್ರಮಕ್ಕೆ ದೂರು ವಿಮಾನಯಾನ ಸಂಸ್ಥೆ ವಿಷಾದ




ಬೆಂಗಳೂರು, ಜು. 28 - ವಿಮಾನಕ್ಕಾಗಿ ವರದಿ ಮಾಡಿಕೊಳ್ಳಲು ತಡವಾಯಿತು ಎಂಬ ಕಾರಣಕ್ಕಾಗಿ ರಾಜ್ಯಪಾಲ ತಾವರ್‌ಚಂದ್ ಗೆಹ್ಲೋಟ್ ಅವರಿಗೆ ಪ್ರಯಾಣ ನಿರಾಕರಿಸಿದ ಕಾರಣಕ್ಕಾಗಿ ಎ.ಐ.ಎಕ್ಸ್. ಕನೆಕ್ಟ್ ಸಂಸ್ಥೆಯು ವಿಷಾದ ವ್ಯಕ್ತಪಡಿಸಿದೆ.

ಏರ್ ಇಂಡಿಯಾದ ಅಂಗ ಸಂಸ್ಥೆ ಯಾದ ಎಐಎಕ್ಸ್ ಕನೆಕ್ಟ್ ಶಿಷ್ಟಾಚಾರ ಉಲ್ಲಂಘಿಸಿದೆ ಎಂದು ರಾಜ್ಯಪಾಲರ ಕಚೇರಿ ದೂರು ನೀಡಿತ್ತು. ನಂತರ ವಿಮಾನಯಾನ ಸಂಸ್ಥೆ ವಿಷಾದ ವ್ಯಕ್ತಪಡಿಸಿದೆ.

ಬೆಂಗಳೂರಿನ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ನಡೆದ ಈ ಘಟನೆಯ ಬಗ್ಗೆ ರಾಜ್ಯಪಾಲರ ಶಿಷ್ಟಾಚಾರ ಅಧಿಕಾರಿ ಎಂ. ವೇಣುಗೋಪಾಲ್ ಅವರು ವಿಮಾನ ನಿಲ್ದಾಣ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದರು.

ಗೆಹ್ಲೋಟ್ ಅವರು ಗುರುವಾರ ಹೈದರಾಬಾದ್‌ಗೆ ತೆರಳಲು ಮಧ್ಯಾಹ್ನ 2.05ಕ್ಕೆ ಎರಡನೇ ಟರ್ಮಿನಲ್‌ನಲ್ಲಿರುವ ವಿಮಾನ ಏರಬೇಕಿತ್ತು. ಮಧ್ಯಾಹ್ನ 1.35ಕ್ಕೆ ರಾಜ್ಯಪಾಲರು ಟರ್ಮಿನಲ್ -1 ರಲ್ಲಿರುವ ವಿ.ಐ.ಪಿ. ಲಾಂಜ್‌ಗೆ ಬಂದಿದ್ದರು. ಅವರ ಸರಕುಗಳನ್ನು ವಿಮಾನದಲ್ಲಿ ಇರಿಸಲಾಗಿತ್ತು. ರಾಜ್ಯಪಾಲರು ಬರುವ ಬಗ್ಗೆ ವಿಮಾನ ನಿಲ್ದಾಣದ ನಿಯಂತ್ರಕರಿಗೆ ತಿಳಿಸಲಾಗಿತ್ತು. ರಾಜ್ಯಪಾಲರು ಮಧ್ಯಾಹ್ನ 2.06ಕ್ಕೆ ವಿಮಾನದ ಮೆಟ್ಟಿಲ ಬಳಿ ಬಂದಿದ್ದರು. ವಿಮಾನದ ಬಾಗಿಲು ಇನ್ನೂ ತೆರೆದೇ ಇತ್ತು. ಆದರೂ, ಎ.ಐ.ಎಕ್ಸ್. ಕನೆಕ್ಟ್ ಉದ್ಯೋಗಿ ರಾಜ್ಯಪಾಲರು ತಡ ಮಾಡಿದ್ದಾರೆ ಎಂದು ಪ್ರವೇಶ ನಿರಾಕರಿಸಿದರು. ಅಲ್ಲದೇ, ವಿಮಾನದಲ್ಲಿದ್ದ ರಾಜ್ಯಪಾಲರ ಸರಕುಗಳನ್ನು ಕೆಳಗೆ ಇಳಿಸಲಾಯಿತು. ಇಷ್ಟರಲ್ಲಿ ಹತ್ತು ನಿಮಿಷ ಹೋಲಾಯಿತು ಎಂದು ದೂರಿನಲ್ಲಿ ಹೇಳಲಾಗಿದೆ.

ರಾಜ್ಯಪಾಲರು ಅಲ್ಲಿಯವರೆಗೂ ವಿಮಾನದ ಮೆಟ್ಟಿಲ ಬಳಿ ಇದ್ದರು ಹಾಗೂ ವಿಮಾನದ ಬಾಗಿಲು ತೆರೆದೇ ಇತ್ತು. ಇಷ್ಟಾದರೂ ರಾಜ್ಯಪಾಲರನ್ನು ಕಡೆಗಣಿಸಿ ಅವಮಾನಿಸಲಾಯಿತು ಎಂದು ವೇಣುಗೋಪಾಲ್ ಹೇಳಿದ್ದಾರೆ.

ಈ ಘಟನೆಯಿಂದ ರಾಜ್ಯದ ಪ್ರಥಮ ಪ್ರಜೆಯಾದ ರಾಜ್ಯಪಾಲರಿಗೆ ತೀವ್ರ ನೋವಾಗಿದೆ. ರಾಜ್ಯಪಾಲರ ಅಧಿಕೃತ ಕಾರ್ಯನಿರ್ವಹಣೆಗೆ ಅಡ್ಡಿಪ ಡಿಸಲಾಗಿದೆ. ಶಿಷ್ಟಾಚಾರ ಉಲ್ಲಂಘನೆಯ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು. ಈ ಘಟನೆಗೆ ಕಾರಣವಾದ ಎಐಎಕ್ಸ್ ಕನೆಕ್ಟ್ ಅಧಿಕಾರಿಗಳ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು ಎಂದು ದೂರಿನಲ್ಲಿ ಹೇಳಲಾಗಿತ್ತು.

ಘಟನೆಯ ಬಗ್ಗೆ ವಿಷಾದಿಸಿರುವ ಎಐಎಕ್ಸ್ ಕನೆಕ್ಟ್, ಈ ಬಗ್ಗೆ ರಾಜ್ಯಪಾಲರ ಕಚೇರಿಯ ಸಂಪರ್ಕದಲ್ಲಿರುವುದಾಗಿ ಹೇಳಿದೆ.

# ಗುಂಗಿನಿಂದ ಹೊರಬಂದಿಲ್ಲ

**(1ನೇ ಪುಟದಿಂದ)** ಬಿಜೆಪಿಯ ಆಡಳಿತದ ಗುಂಗಿನಿಂದ ಅಧಿಕಾರಿಗಳು ಹೊರಬಂದಿಲ್ಲ.

ಕ್ಷೇತ್ರದ ಕಾರ್ಯಗಳಿಗೆ ಸಂಬಂಧಿಸಿದಂತೆ ಸಚಿವರನ್ನು ಸಂಪರ್ಕಿಸಿದರೂ ಸಕಾರಾತ್ಮಕ ವಾದ ಸ್ಪಂದನೆ ದೊರೆಯುತ್ತಿಲ್ಲ. ಇಂತಹ ಪರಿಸ್ಥಿಯಲ್ಲಿ ಬೇರೆ ದಾರಿಯೂ ಕಾಣುತ್ತಿಲ್ಲ.

ನಾನು ಶಾಸಕನಾಗುವ ಬದಲು, ಸಚಿವರಿಗೆ ಆಪ್ತ ಕಾರ್ಯದರ್ಶಿ ಇಲ್ಲವೇ ವಿಶೇಷ ಕರ್ತವ್ಯಾಧಿಕಾರಿ ಆಗಿರಬೇಕಿತ್ತು. ಸರ್ಕಾರದಲ್ಲಿ ಅವರ ಮಾತು ನಡೆಯುವ ಹಾಗೆ ನನ್ನ ಮಾತು ನಡೆಯುವುದಿಲ್ಲ.

ಶಾಸಕನಾದರೂ ನನ್ನ ಯಾವುದೇ ಕೆಲಸಗಳು ಆಗುತ್ತಿಲ್ಲ. ಕ್ಷೇತ್ರದಲ್ಲಿ ಜನರ ನಿರೀಕ್ಷೆಗಳು ಹೆಚ್ಚಾಗಿವೆ. ಸಚಿವರನ್ನು ಭೇಟಿ ಮಾಡಬೇಕು ಎಂದರೆ ಮೊದಲು ಅವರ ಸುತ್ತಮುತ್ತಲಿನವರನ್ನು ಭೇಟಿ ಮಾಡಬೇಕು ಎಂದು ತಮ್ಮ ಅಳಲನ್ನು ತೋಡಿಕೊಂಡಿದ್ದಾರೆ.

ಜನರ ಸಮಸ್ಯೆ ಆಲಿಸಿ ಪರಿಹಾರ ಒದಗಿಸಲು ಆಗುತ್ತಿಲ್ಲ. ಪ್ರಭಾವಿ ಸಚಿವರ ಆಪ್ತ ಕಾರ್ಯದರ್ಶಿಯಾದರೆ ಮಾತ್ರ ಕೆಲಸ-ಕಾರ್ಯಗಳು ಸುಗಮವಾಗಿ ನಡೆಯುತ್ತವೆ ಎಂಬುದು ಕಂಡುಬಂದಿದೆ. ಈ ರೀತಿಯಾದರೆ ನನಗೂ ತುಂಬಾ ಅನುಕೂಲವಾಗಲಿದೆ ಎಂದು ಶಾಸಕರು ತಮ್ಮ ಸಮಸ್ಯೆಯನ್ನು ಮುಖ್ಯಮಂತ್ರಿ ಗಮನಕ್ಕೆ ತಂದಿದ್ದಾರೆ.

ಪತ್ರದಲ್ಲಿ ಉಲ್ಲೇಖವಾಗಿದ್ದ ಸಾರಾಂ ಶವನ್ನು ಓದಿದ ಮುಖ್ಯಮಂತ್ರಿಗಳು, ತಕ್ಷಣವೇ ಪತ್ರ ಹರಿದು ಹಾಕಿದ್ದಾರೆ. ಅಲ್ಲದೆ, ಶಾಸಕರಾಗಿ ಈ ರೀತಿಯ ಪತ್ರ ಬರೆಯಬಾರದು ಎಂಬ ಹಿತೋಪದೇಶ ಮಾಡಿದ್ದಾರೆ.

ಜತೆಗೆ ಶಾಸಕರ ನೈಜ ಸಮಸ್ಯೆಯನ್ನು ಆಲಿಸಿ ಪರಿಹರಿಸಿಕೊಳ್ಳುವ ಬಗೆಯನ್ನು ತಿಳಿ ಹೇಳಿದ್ದಾರೆ. ಶಾಸಕರ ಬೇಡಿಕೆ ಹಾಗೂ ಸಮಸ್ಯೆಗಳಿಗೆ ಸ್ಪಂದಿಸುವಂತೆ ಸಚಿವರಿಗೆ ನಿರ್ದೇಶನ ನೀಡುವುದಲ್ಲದೆ, ಅಧಿಕಾರಿಗ ಳಿಗೂ ತಾಕೀತು ಮಾಡುವ ಭರವಸೆ ನೀಡಿ ದ್ದಾರೆ ಎಂದು ಉನ್ನತ ಮೂಲಗಳು ತಿಳಿಸಿವೆ.

# ಮಗು ಮಾರಿದ ದಂಪತಿ

**(1ನೇ ಪುಟದಿಂದ)** ದಂಪತಿ ತಮ್ಮ ಮಗುವನ್ನು ಮಾರಿದ್ದಾರೆ. ಮಗು ಮಾರಿದ ಹಣದಿಂದ ದಂಪತಿ ಡಿಖಾ ಹಾಗೂ ಮಂಡರ್ಮೊನಿ ಎಂಬಲ್ಲಿಗೂ ಪ್ರಯಾಣ ಮಾಡಿದ್ದಾರೆ. ತಿಂಗಳ ಹಿಂದೆಯೇ ಈ ಘಟನೆ ನಡೆದಿತ್ತಾದರೂ, ಜು.24 ರಂದು ಪೊಲೀಸರಿಗೆ ಮಾಹಿತಿ ದೊರೆ ತಿದೆ. ಮಗುವನ್ನು ಖರೀದಿಸುವುದು ಅಕ್ರಮ, ಮಗು ಖರೀದಿಸಿದವರ ಹುಡುಕಾಟ ನಡೆಸುತ್ತಿ ದ್ದೇವೆ ಎಂದೂ ಪೊಲೀಸರು ಹೇಳಿದ್ದಾರೆ.

# ರೈತರಿಗೆ ಅಲ್ಪಾವಧಿ ತಳಿ ಬೀಜಗಳ ವಿತರಣೆ

ಬೆಂಗಳೂರು, ಜು. 28 - ಮುಂಗಾರು ಮಳೆ ವಿಳಂಬವಾದ ಹಿನ್ನೆಲೆಯಲ್ಲಿ ರೈತರಿಗೆ ಅನುಕೂಲವಾಗು ವಂತೆ ಅಲ್ಪಾವಧಿ ತಳಿಗಳ ಬಿತ್ತನೆ ಬೀಜ ನೀಡಲಾಗುವುದು ಎಂದು ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ತಿಳಿಸಿದರು.

ರಾಜ್ಯಾದ್ಯಂತ ಉತ್ತಮ ಮಳೆಯಾ ಗಿರುವ ಹಿನ್ನೆಲೆಯಲ್ಲಿ ರಸಗೊಬ್ಬರ ಮತ್ತು ಬಿತ್ತನೆ ಬೀಜ ಪೂರೈಕೆಗೆ ಸಂಬಂಧಿಸಿದಂತೆ ಹಿರಿಯ ಅಧಿಕಾರಿ ಗಳೊಂದಿಗೆ ಸಭೆ ನಡೆಸಿದ ಸಚಿವರು, ದ್ವಿದಳ ಧಾನ್ಯ ಬೆಳೆಯಲು ಸಮಯ ಮೀರಿರುವುದರಿಂದ ಅಲ್ಪಾವಧಿಯಲ್ಲಿ ಬೆಳೆಯುವ ರಾಗಿ, ಹುರುಳಿ, ಜೋಳ ಸೇರಿದಂತೆ ಅಗತ್ಯ ಬಿತ್ತನೆ ಬೀಜ ಪೂರೈಸಲು ತೀರ್ಮಾನಿಸಲಾಗಿದೆ ಎಂದರು.

ಸಭೆಯ ನಂತರ ಈ ವಿಷಯ ತಿಳಿಸಿದ ಚಲುವರಾಯಸ್ವಾಮಿ, 14 ಲಕ್ಷ ಟನ್ ರಸಗೊಬ್ಬರದ ದಾಸ್ತಾನಿದೆ. ಅಲ್ಲದೆ, 1 ಲಕ್ಷ ಕ್ವಿಂಟಾಲ್ ಬಿತ್ತನೆ ಬೀಜ ಸಂಗ್ರಹವಿದೆ. ಯಾವುದಾದರೂ ಜಿಲ್ಲೆಯಲ್ಲಿ ಗೊಬ್ಬರ ಮತ್ತು ಬಿತ್ತನೆ ಬೀಜದ ಕೊರತೆ ಇದ್ದರೆ, ನೆರೆಯ ಜಿಲ್ಲೆಯಿಂದ ಪೂರೈಕೆ ಮಾಡಲು ಅಧಿಕಾರಿಗಳಿಗೆ ಆದೇಶ ಮಾಡಲಾಗಿದೆ ಎಂದು ಹೇಳಿದರು.

ಮಳೆ ಕೊರತೆಯಿಂದ ಶೇ.53ರಷ್ಟು ಬಿತ್ತನೆ ಯಾಗಿದೆ. ಒಟ್ಟಾರೆ 82 ಲಕ್ಷ ಹೆಕ್ಟೇರ್ ಪ್ರದೇಶದ ಪೈಕಿ 43 ಲಕ್ಷ ಹೆಕ್ಟೇರ್‌ನಲ್ಲಿ ಬಿತ್ತನೆಯಾಗಿದೆ. ಮುಂದಿನ 15 ದಿನಗಳಶೇ.100ರಷ್ಟು ಬಿತ್ತನೆಯಾಗಲಿದೆ ಎಂದರು. ರೈತರು ತಮಗೆ ಅಗತ್ಯವಾಗಿರುವ ಬಿತ್ತನೆ ಬೀಜವನ್ನು ರೈತ ಕೇಂದ್ರ ಇಲ್ಲವೇ ಇಲಾಖೆಯಿಂದ ಪಡೆಯಬಹುದಾಗಿದೆ ಎಂದು ಹೇಳಿದರು.

ಅಲ್ಲದೆ, ಇಲಾಖೆಗೆ ಹೊರೆಯಾಗಿದ್ದ ಮೈಕ್ರೋ ಇರಿಗೇಷನ್ ಹಾಗೂ ಕರ್ನಾಟಕ ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಮುಚ್ಚಲು ತೀರ್ಮಾನಿಸಿರುವುದಾಗಿ ಸಚಿವರು ಇದೇ ಸಂದರ್ಭದಲ್ಲಿ ಹೇಳಿದರು.

ಆಗ್ರೋ ಕಾರ್ಪೊರೇಷನ್ ಈಗಾಗಲೇ ಮುಚ್ಚಿದ್ದರೂ ನ್ಯಾಯಾಲಯದಲ್ಲಿ ವಿಚಾರಣೆ ನಡೆಯುತ್ತಿದೆ. ತ್ವರಿತ ಪ್ರಕರಣ ಇತ್ಯರ್ಥಕ್ಕೆ ಅಧಿಕಾರಿಗಳಿಗೆ ಸೂಚಿಸಲಾಗಿದೆ. ಮೈಕ್ರೋ ಇರಿಗೇಷನ್‌ನಲ್ಲಿ ಯಾವುದೇ ಕೆಲಸವಾಗುತ್ತಿಲ್ಲ. ಹನಿ ಮತ್ತು ತುಂತುರು ನೀರಾವರಿ ಕಾರ್ಯವನ್ನು ತೋಟಗಾರಿಕೆ ಇಲಾಖೆ ನಿರ್ವಹಿಸಲಿದೆ. ಇವೆರಡನ್ನೂ ಮುಚ್ಚಿ ಅಲ್ಲಿನ ನೌಕರರನ್ನು ಇಲಾಖೆಯಲ್ಲಿ ವಿಲೀನ ಮಾಡಲು ಸಭೆಯಲ್ಲಿ ನಿರ್ಧಾರ ಕೈಗೊಳ್ಳಲಾಗಿದೆ ಎಂದರು.

ಕೃಷಿ ವಿಶ್ವ ವಿದ್ಯಾಲಯಗಳ ವ್ಯಾಪ್ತಿಯಲ್ಲಿ 167 ಕೋಟಿ ರೂ. ವೆಚ್ಚದ 37 ಕಾಮಗಾರಿಗಳು ನಡೆಯುತ್ತಿವೆ. ಅವುಗಳನ್ನು ತ್ವರಿತವಾಗಿ ಪೂರ್ಣಗೊಳಿಸಬೇಕು ಹಾಗೂ ಕಾಮಗಾರಿ ಗುಣಮಟ್ಟ ಪರಿಶೀಲಿಸಲು ಕುಲಪತಿಗಳಿಗೆ ಸೂಚಿಸಲಾಗಿದೆ ಎಂದೂ ಚಲುವರಾಯಸ್ವಾಮಿ ತಿಳಿಸಿದರು.

ವಿಶ್ವವಿದ್ಯಾಯಲದ ಎಂಜಿನಿಯರ್ ವಿಭಾಗವನ್ನು ಇದಕ್ಕಾಗಿ ಬಳಸಿಕೊಳ್ಳಲು ನಿರ್ದೇಶನ ನೀಡಲಾಗಿದೆ ಎಂದರು.

# ದಾವಣಗೆರೆ - ಹರಿಹರ ಅರ್ಬನ್ ಬ್ಯಾಂಕ್ ಅಧ್ಯಕ್ಷರಾಗಿ ಮುರುಗೇಶ್ ಪುನರಾಯ್ಕೆ, ಉಪಾಧ್ಯಕ್ಷರಾಗಿ ಜಯಮ್ಮ



**(1ನೇ ಪುಟದಿಂದ)** ಅನುಮೋದಿಸಿದರು.

ನಿರ್ದೇಶಕರುಗಳಾಗಿ ಕಿರುವಾಡಿ ವಿ. ಸೋಮಶೇಖರ್, ಶಂಕರ್ ಖಟಾವ್‌ಕರ್, ಎಸ್. ಕೆ.ಪ್ರಭುಪ್ರಸಾದ್, ಕೆ.ಎಂ.ಜ್ಯೋತಿಪ್ರಕಾಶ್, ಬಿ.ಚಿದಾನಂದಪ್ಪ, ಪಿ.ಹೆಚ್.ವೆಂಕಪ್ಪ, ಬಿ. ನಾಗೇಂದ್ರಾಚಾರಿ, ಎ. ಕೊಟ್ರೇಶ್, ಆರ್.ವಿಶಾಲ್ ಕುಮಾರ್, ಉಮಾ ವಾಗೀಶ್, ಕೆ.ಪಿ. ಅನಿತಾ, ಅನುಪಾ ಡಾ. ವೀರೇಂದ್ರ ಸ್ವಾಮಿ ಪ್ರಮಾಣ ಪತ್ರ ಸ್ವೀಕರಿಸಿದರು.

ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕ ತುಳಸೀನಾಥ್, ನಟರಾಜ್, ತಿರುಕಪ್ಪ ಮುಂತಾದ ಸಿಬ್ಬಂದಿ ಹಾಗೂ ಶ್ರೀಮತಿ ಸವಿತಾ ಮುರುಗೇಶ್ ಉಪಸ್ಥಿತರಿದ್ದರು.

ಶಾಸಕ ಬಿ.ಪಿ.ಹರೀಶ್, ದಾವಣಗೆರೆ ಅರ್ಬನ್ ಕೋ ಆಪರೇಟಿವ್ ಬ್ಯಾಂಕ್ ಅಧ್ಯಕ್ಷ ಕೋಗುಂಡಿ ಬಕ್ಕೇಶಪ್ಪ, ಜಿಲ್ಲಾ ವೀರಶೈವ ಮಹಾಸಭಾ ಅಧ್ಯಕ್ಷ ದೇವರಮನಿ ಶಿವಕುಮಾರ್, ರಮಣ್ ಲಾಲ್ ಪಿ.ಸಂಘವಿ, ದೂಡಾ ಮಾಜಿ ಅಧ್ಯಕ್ಷ ಕೆ.ಎಂ. ಸುರೇಶ್, ಶಾಮನೂರು ಮಹಲಿಂಗಪ್ಪ, ಕಂದನಕೋವಿ ಪ್ರಕಾಶ್ ಮುಂತಾಗಿ ದಾವಣಗೆರೆ, ಹರಿಹರ, ಮಲೇಬೆನ್ನೂರು ಮುಂತಾದೆಡೆಗಳಿಂದ ನೂರಾರು ಗಣ್ಯರು ಆಗಮಿಸಿ, ನೂತನ ಅಧ್ಯಕ್ಷ - ಉಪಾಧ್ಯಕ್ಷರು ಹಾಗೂ ನಿರ್ದೇಶಕರುಗಳನ್ನು ಅಭಿನಂದಿಸಿದರು.

# ಗ್ಯಾರಂಟಿ ಅಕ್ರಮ-ದೂರು ಸಿಎಂಗೆ ನೋಟಿಸ್

**(1ನೇ ಪುಟದಿಂದ)** ಮೂಲಕ ಸಂವಿಧಾನ ಹಾಗೂ ಜನಪ್ರತಿನಿಧಿ ಕಾಯ್ದೆಯ ಮಾರ್ಗಸೂಚಿಗಳನ್ನು ಉಲ್ಲಂಘಿಸಿದ್ದಾರೆ. ಗ್ಯಾರಂಟಿಗಳು ಕೊಡುಗೆಗಳ ಸ್ವರೂಪದಲ್ಲಿವೆ. ಇದರಿಂದ ವರುಣ ಕ್ಷೇತ್ರದ ಮತದಾರರ ಮೇಲೆ ಪ್ರಭಾವ ಬೀರಲಾಗಿದೆ ಎಂದೂ ಅರ್ಜಿದಾರ ಕೆ.ಎಂ. ಶಂಕರ್ ಹೇಳಿದ್ದರು.

# ಗೃಹಲಕ್ಷ್ಮಿ ಅರ್ಜಿ ನಗರ ಪ್ರದೇಶಗಳಲ್ಲೇ ನೋಂದಣಿ ಹಿಂದೆ

**(1ನೇ ಪುಟದಿಂದ)** ಮಾತ್ರ ಅರ್ಜಿ ದಾಖಲಿಸಬೇಕು ಎಂದು ತಿಳಿಸಲಾಗಿತ್ತು. ಈ ಪ್ರಕ್ರಿಯೆಯಲ್ಲಿ ತೊಡಕಾದ ಕಾರಣ, ಸೇವಾ ಸಿಂಧು ಕೇಂದ್ರಗಳಿಗೆ ಜನರು ನೇರವಾಗಿ ಬಂದು ಅರ್ಜಿ ದಾಖಲಿಸಬಹುದು ಎಂದು ತಿಳಿಸಲಾಗಿತ್ತು.

ಇದರಿಂದಾಗಿ ನಗರದ ದಾವಣಗೆರೆ ಒನ್ ಕೇಂದ್ರಗಳ ಎದುರು ದೊಡ್ಡ ಸಂಖ್ಯೆಯಲ್ಲಿ ಜನರು ಬಂದು ಸರದಿಯಲ್ಲಿ ನಿಲ್ಲುವಂತಾಗಿತ್ತು. ಮಳೆ ಹಾಗೂ ಚಳಿಯ ನಡುವೆಯೂ ಕೇಂದ್ರಗಳ ಎದುರು ಜನ ಜಮಾಯಿಸುತ್ತಿದ್ದರು.

ಇನ್ನು ಕೆಲವರು ನಗರ ಕೇಂದ್ರಗಳ ಸಹವಾಸವೇ ಬೇಡ ಎಂದು ಗ್ರಾಮಾಂತರ ಕೇಂದ್ರಗಳ ಕಡೆಗೂ ಮುಖ ಮಾಡಿದ್ದರು. ಪ್ರಜಾಪ್ರತಿನಿಧಿಗಳನ್ನು ನೇಮಕ ಮಾಡಿ ಮನೆಯಿಂದಲೇ ಅರ್ಜಿ ಪಡೆಯುವುದಾಗಿ ಸರ್ಕಾರ ಭರವಸೆ ನೀಡಿತ್ತಾದರೂ, ಇದುವರೆಗೂ ಪ್ರಜಾಪ್ರತಿನಿಧಿಗಳ ನೇಮಕ ಆಗಿರಲಿಲ್ಲ.

ಈ ತೊಡಕುಗಳ ನಡುವೆಯೇ, ಜಿಲ್ಲೆಯಲ್ಲಿ ಅರ್ಧದಷ್ಟು ಫಲಾನುಭವಿಗಳು ಅರ್ಜಿ ದಾಖಲಿಸಿದ್ದಾರೆ. ನಗರದಲ್ಲಿ ಹೊಸ ಕೇಂದ್ರಗಳ ಸ್ಥಾಪನೆ ಹಾಗೂ ಪ್ರಜಾಪ್ರತಿನಿಧಿಗಳ ನೇಮಕದಿಂದ ಪರಿಸ್ಥಿತಿ ಸುಧಾರಿಸುವ ನಿರೀಕ್ಷೆ ಇಟ್ಟುಕೊಳ್ಳಬಹುದಾಗಿದೆ.

# ಕಾನೂನು ಸಲಹೆ ಪಡೆದು ಅಲೆಮಾರಿಗಳಿಗೆ ಆಯೋಗ

ಬೆಂಗಳೂರು, ಜು. 28 - ಅಲೆಮಾರಿ ಜನಾಂಗದವರ ಆಯೋಗ ರಚನೆಗೆ ಸಂಬಂಧಿಸಿದಂತೆ ಕಾನೂನು ಸಲಹೆ ಪಡೆದು ತೀರ್ಮಾನಕ್ಕೆ ಬರಲಾ ಗುವುದು. ಈ ಬಗ್ಗೆ ಸರ್ಕಾರ ಸಕಾರಾತ್ಮಕ ವಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಪರಿಶಿಷ್ಟ ಜಾತಿ, ಪಂಗಡ ಹಾಗೂ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮಗಳಿಗೆ ಅನುದಾನ ನೀಡುವ ಬಗ್ಗೆ ಪರಿಶೀಲಿಸಿ ಕ್ರಮ ವಹಿಸಲಾಗುವುದು. ಅಲೆಮಾರಿ ಜನಾಂಗಗಳು ಶೈಕ್ಷಣಿಕವಾಗಿ, ಆರ್ಥಿಕವಾಗಿ ಮುಖ್ಯವಾಹಿನಿಗೆ ಬರಬೇಕು. ಇವರಿಗೆ ವಿಶೇಷವಾಗಿ ವಸತಿ ಸೌಲಭ್ಯ ಕಲ್ಪಿಸುವ ಬಗ್ಗೆಯೂ ಪರಿಶೀಲಿಸಲಾಗುವುದು. ಸಾಮಾಜಿಕ ನ್ಯಾಯ ಎಲ್ಲರಿಗೂ ದೊರಕಬೇಕು ಎಂದು ಮುಖ್ಯಮಂತ್ರಿಗಳು ತಿಳಿಸಿದರು.

ರಾಜ್ಯದ ಎಸ್.ಸಿ., ಎಸ್.ಟಿ. ಮತ್ತು ಹಿಂದುಳಿದ ವರ್ಗಗಳ ಅಲೆಮಾರಿ, ಅರೆ ಅಲೆಮಾರಿ, ವಿಮುಕ್ತ ಬುಡಕಟ್ಟು ಸಂಘಟನೆಗಳ ಸಮನ್ವಯ ಸಮಿತಿಯ ರಾಜ್ಯ ಮುಖಂಡರೊಂದಿಗೆ ಅಲೆಮಾರಿ ಜನರ ಕುಂದುಕೊರತೆಗಳ ಕುರಿತು ನಡೆದ ಸಭೆಯಲ್ಲಿ ಮಾತನಾಡುವಾಗ ಅವರು ಈ ಹೇಳಿಕೆ ನೀಡಿದ್ದಾರೆ.

ಅಲೆಮಾರಿಗಳ ಸಮಸ್ಯೆಗಳು ವಿಶಿಷ್ಟವಾಗಿದ್ದು, ಒಟ್ಟು 120 ಜಾತಿಗಳಿವೆ. ಈ ಪೈಕಿ ಎಸ್.ಸಿ. 51, ಎಸ್.ಟಿ. 23 ಹಾಗೂ ಹಿಂದುಳಿದ ವರ್ಗದ 46 ಜಾತಿಗಳಿವೆ. ವಿವಿಧ ರಾಜ್ಯ ಮಟ್ಟದ ಸಂಘಟನೆಗಳಿದ್ದು , ಅವುಗಳನ್ನು ಒಟ್ಟು ಸೇರಿಸಿ, ಸಮನ್ವಯ ಸಮಿತಿ ರಚಿಸಲಾಗಿದೆ ಎಂದು ಹೇಳಿದರು.

ಸಭೆಯಲ್ಲಿ ಮಾತನಾಡಿದ ಮುಖಂಡರು, ಅತ್ಯಂತ ಹೀನಾಯ ಪರಿಸ್ಥಿತಿಯಲ್ಲಿ ಬದುಕುತ್ತಿರುವ, ಅಸ್ಮಿತೆ ಇಲ್ಲದ ಸಮುದಾಯಗಳಿಗೆ ಸರ್ಕಾರದ ಸೌಲಭ್ಯಗಳು ದೊರೆಯುತ್ತಿಲ್ಲ. ಸರ್ಕಾರ ಅಲೆಮಾರಿಗಳನ್ನು ಗುರುತಿಸಬೇಕಿದೆ. ದಾಖಲೆಗಳಲ್ಲಿ ಇವರು ಇಲ್ಲದಿರುವುದರಿಂದ ಸಮಾಜದ ತಿರಸ್ಕಾರಕ್ಕೆ ಒಳಗಾಗಿದ್ದಾರೆ. ಜಾತಿ ಪ್ರಮಾಣಪತ್ರ ಕೂಡ ಇವರಿಗಿಲ್ಲ. ಸರ್ಕಾರ ಕೆಲವು ಜಾತಿಗಳನ್ನು ಮಾತ್ರ ಗುರುತಿಸಿದ್ದು, ಇವರನ್ನು ಗುರುತಿಸುವ ಔದಾರ್ಯವನ್ನು ಸರ್ಕಾರ ತೋರಬೇಕು ಎಂದರು.

ಸಮಾನ ಕುಲ, ಗೋತ್ರ, ಭಾಷೆ ಇರುವ ಜಾತಿಗಳನ್ನು ಗುರುತಿಸಬೇಕಿದೆ. ತಬ್ಬಲಿ ಸಮುದಾಯಗಳನ್ನು ಬೆಳೆಸುವ ನಿಟ್ಟಿನಲ್ಲಿ ಅಲೆಮಾರಿ ಸಮುದಾಯಗಳಿಗೆ ಆಯೋಗ ರಚಿಸಬೇಕು, ಆಗಸ್ಟ್ 31 ರಂದು ರಾಷ್ಟ್ರೀಯ ಅಲೆಮಾರಿ ವಿಮುಕ್ತ ದಿನಾಚರಣೆಯಂದು ರಾಜ್ಯ ಸರ್ಕಾರ ಆಚರಿಸಬೇಕು. ಜೋಗಿ, ಪಿಚ್ಚಗುಂಟಲು ಜಾತಿಗಳ ಕುಲಶಾಸ್ತ್ರೀಯ ಅಧ್ಯಯನ ಪೂರ್ಣಗೊಂಡಿದೆ. ಅವುಗಳನ್ನು ಸೂಕ್ತ ಜಾತಿಗೆ ಸೇರಿಸಿ ಮೀಸಲಾತಿ ಕಲ್ಪಿಸಬೇಕು, ಅಲೆಮಾರಿ ಸಮುದಾಯಕ್ಕೂ ರಾಜಕೀಯ ಪ್ರಾತಿನಿಧ್ಯ ನೀಡಬೇಕು ಎಂದು ಸಮಿತಿಯ ಮುಖಂಡರು ಮನವಿ ಮಾಡಿದರು.

ಹಲವು ಜಾತಿಗಳು ಬಹುನಾಮಿಗಳಾಗಿರುವುದರಿಂದ ಜಾತಿ ಪ್ರಮಾಣ ಪತ್ರ ದೊರೆಯುತ್ತಿಲ್ಲ. ಅಗೋಚರ ಸಮುದಾಯಗಳು ಪ್ರಾತಿನಿಧ್ಯವಿಲ್ಲದೆ ಇದ್ದಾರೆ. ಅವರಿಗೆ ಗುರುತು ಸಿಕ್ಕರೆ ಶಿಕ್ಷಣ, ಸರ್ಕಾರದ ಯೋಜನೆಗಳನ್ನು ಪಡೆಯಲು ಸಾಧ್ಯವಾಗುತ್ತದೆ ಎಂದು ಮನವಿ ಮಾಡಿದರು.

# ಸೆಮಿಕಂಡಕ್ಟರ್ ಉದ್ಯಮಗಳಿಗೆ ಶೇ.50ರ ಹಣಕಾಸು ನೆರವು : ಮೋದಿ

ಗಾಂಧಿನಗರ, ಜು. 28 - ದೇಶದಲ್ಲಿ ಸೆಮಿಕಂಡಕ್ಟರ್ ಸೌಲಭ್ಯ ಸ್ಥಾಪಿಸುವ ಉದ್ಯಮಗಳಿಗೆ ಶೇ.50ರ ಹಣಕಾಸು ನೆರವು ನೀಡಲಾಗುವುದು ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ತಿಳಿಸಿದ್ದಾರೆ.


ಸೆಮಿಕಾನ್ ಇಂಡಿಯಾ 2023 ಸಮಾವೇಶ ಉದ್ಘಾಟಿಸಿ ಮಾತನಾಡಿದ ಅವರು, ತಮ್ಮ ಸರ್ಕಾರ ಸೆಮಿಕಂಡಕ್ಟರ್ ಉದ್ಯಮಗಳಿಗೆ ಕೆಂಪು ಹಾಸಿನ ಸ್ವಾಗತ ನೀಡಲಿದೆ ಎಂದು ಹೇಳಿದರು.

ದೇಶದಲ್ಲಿ ಸೆಮಿಕಂಡಕ್ಟರ್ ಉದ್ಯಮ ಬೆಳೆಸುವ ಸಲುವಾಗಿ ಭಾರತ ಅಗತ್ಯ ವ್ಯವಸ್ಥೆಗಳನ್ನು ಸಂಪೂರ್ಣವಾಗಿ ರೂಪಿಸುತ್ತಿದೆ. ಭಾರತದಲ್ಲಿ ಸೆಮಿಕಂಡಕ್ಟರ್ ಉದ್ಯಮ ವೇಗದ ಬೆಳವಣಿಗೆ ಕಾಣಲಿದೆ ಎಂದು ಮೋದಿ ಹೇಳಿದರು. ವರ್ಷದ ಹಿಂದೆ ಭಾರತದ ಸೆಮಿಕಂಡಕ್ಟರ್ ಉದ್ಯಮದಲ್ಲಿ ಏಕೆ ಹೂಡಿಕೆ ಮಾಡಬೇಕು ಎಂದು ಜನರು ಕೇಳುತ್ತಿದ್ದರು. ಈಗ ಭಾರತದಲ್ಲಿ ಹೂಡಿಕೆ ಏಕಾಗಬಾರದು ಎಂದು ಹೇಳುತ್ತಿದ್ದಾರೆ ಎಂದವರು ತಿಳಿಸಿದರು.

ಸೆಮಿಕಂಡಕ್ಟರ್ ವಿನ್ಯಾಸಗಳನ್ನು ಕಲಿಸಲು ಭಾರತದ 300 ಕಾಲೇಜುಗಳನ್ನು ಆಯ್ಕೆ ಮಾಡಲಾಗಿದೆ ಎಂದು ಮೋದಿ ಇದೇ ಸಂದರ್ಭದಲ್ಲಿ ತಿಳಿಸಿದರು.

# ಬಾ.ಮ. ಬಸವರಾಜಯ್ಯ, ಕೆ.ಎನ್. ಸ್ವಾಮಿ ಅವರಿಗೆ 'ಮಹಲಿಂಗರಂಗ' ಪ್ರಶಸ್ತಿ ಪ್ರದಾನ





**ನಗರದಲ್ಲಿ ನಾಳೆ ಪ್ರಶಸ್ತಿ ಪ್ರದಾನ ಕಾರ್ಯಕ್ರಮ, ಚಲನಚಿತ್ರ ನಿರ್ದೇಶಕ ಟಿ.ಎಸ್. ನಾಗಾಭರಣ ಅವರಿಂದ ಪ್ರಶಸ್ತಿ ಪ್ರದಾನ**

ದಾವಣಗೆರೆ, ಜು. 28- ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಮೂಲಕ ನೀಡಲಾಗುವ ಶ್ರೀಮತಿ ಗೌರಮ್ಮ ಪಿ. ಮೋತಿ ರಾಮರಾವ್ ಚಾರಿಟಬಲ್ ಟ್ರಸ್ಟ್ ಸ್ಥಾಪಿತ 'ಮಹಲಿಂಗರಂಗ' ಜಿಲ್ಲಾ ಸಾಹಿತ್ಯ ಪ್ರಶಸ್ತಿ ಪ್ರದಾನ ಸಮಾರಂಭವನ್ನು ನಾಡಿದ್ದು ದಿನಾಂಕ 30ರ ಭಾನುವಾರ ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಬಿ.ವಾಮದೇವಪ್ಪ ತಿಳಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿಂದು ಮಾತನಾಡಿದ ಅವರು,2022ನೇ ಸಾಲಿನ ಮಹಲಿಂಗ ರಂಗ ಪ್ರಶಸ್ತಿಗೆ ಸಾಹಿತಿ, ಹಿರಿಯ ಪತ್ರಕರ್ತ ಬಾ.ಮ. ಬಸವರಾಜಯ್ಯ ಹಾಗೂ 2023ನೇ ಸಾಲಿನ ಪ್ರಶಸ್ತಿಗೆ ಸಾಹಿತಿ, ವಿಶ್ರಾಂತ ಉಪನ್ಯಾಸಕ ಕೆ.ಎನ್. ಸ್ವಾಮಿ ಅವರು ಭಾಜನರಾಗಿದ್ದಾರೆ ಎಂದು ಹೇಳಿದರು.

ಕುವೆಂಪು ಕನ್ನಡ ಭವನದಲ್ಲಿ ಮಧ್ಯಾಹ್ನ 3.30ಕ್ಕೆ ನಡೆಯಲಿರುವ ಕಾರ್ಯಕ್ರಮವನ್ನು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಉದ್ಘಾಟಿಸಲಿದ್ದಾರೆ. ಚಲನಚಿತ್ರ ನಿರ್ದೇಶಕರೂ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ನಿಕಟಪೂರ್ವ ಅಧ್ಯಕ್ಷರೂ ಆಗಿರುವ ಟಿ.ಎಸ್. ನಾಗಾಭರಣ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ.

ಪತ್ರಕರ್ತ ಬಿ.ಎನ್. ಮಲ್ಲೇಶ್ ಅಭಿನಂದನಾ ನುಡಿಗಳನ್ನಾಡಲಿದ್ದಾರೆ. ಮುಖ್ಯ ಅತಿಥಿಗಳಾಗಿ ಪ್ರಶಸ್ತಿ ಪ್ರಯೋಜಕರಾದ ಮೋತಿ ಆರ್.ಪರಮೇಶ್ವರರಾವ್ ಆಗಮಿಸಲಿದ್ದಾರೆ. ಜಾನಪದ ತಜ್ಞ ಡಾ.ಎಂ.ಜಿ. ಈಶ್ವರಪ್ಪ, ಜಿಲ್ಲಾ ಕಸಾಪ ನಿಕಟಪೂರ್ವ ಅಧ್ಯಕ್ಷ ಡಾ.ಹೆಚ್.ಎಸ್. ಮಂಜುನಾಥ ಕುರ್ಕಿ, ತಾಲ್ಲೂಕು ಕಸಾಪ ಅಧ್ಯಕ್ಷೆ ಸುಮತಿ ಜಯಪ್ಪ ಉಪಸ್ಥಿತರಿರುವರು.

2002ರಿಂದ ಇಲ್ಲಿಯವರೆಗೆ 18 ಜನರಿಗೆ ಪ್ರಶಸ್ತಿ ನೀಡಿ ಗೌರವಿಸಲಾಗಿದ್ದು, ಪ್ರಶಸ್ತಿಯು 15 ಸಾವಿರ ರೂ. ನಗದು ಹಾಗೂ ಸ್ಮರಣಿಕೆಗಳನ್ನೊಳಗೊಂಡಿರುತ್ತದೆ ಎಂದು ವಾಮದೇವಪ್ಪ ಮಾಹಿತಿ ನೀಡಿದರು.

ಪತ್ರಿಕಾಗೋಷ್ಠಿಯಲ್ಲಿ ಕಸಾಪ ಗೌರವ ಕಾರ್ಯ ದರ್ಶಿಗಳಾದ ರೇವಣಸಿದ್ದಪ್ಪ ಅಂಗಡಿ, ಬಿ.ದಿಳ್ಯೆಪ್ಪ, ಕಾರ್ಯಕಾರಿಣಿ ಸಮಿತಿ ಸದಸ್ಯರಾದ ಸತ್ಯಭಾಮಾ ಮಂಜುನಾಥ್, ರುದ್ರಾಕ್ಷಿಬಾಯಿ ಉಪಸ್ಥಿತರಿದ್ದರು.

# ಆ.1 ರಿಂದ ನಾಲೆಗಳಿಗೆ ಭದ್ರಾ ನೀರು ಹರಿಸಲು ಒತ್ತಾಯ



**'ಭದ್ರಾ ನೀರಾವರಿ ಸಲಹಾ ಸಮಿತಿ ಸಭೆಯನ್ನು ಕರೆದಿಲ್ಲ. ಜಿಲ್ಲಾ ಉಸ್ತುವಾರಿ ಸಚಿವರಾಗಲೀ ಮತ್ತು ಶಾಸಕರಾಗಲೀ ಏಕೆ ಈ ಬಗ್ಗೆ ಚಕಾರವೆತ್ತಿಲ್ಲ'**
**- ರೈತರ ಒಕ್ಕೂಟದ ಪ್ರಶ್ನೆ**

ದಾವಣಗೆರೆ, ಜು. 28- ಮಧ್ಯ ಕರ್ನಾಟಕದ ರೈತರ ಜೀವನಾಡಿ ಭದ್ರಾ ಜಲಾಶಯಕ್ಕೆ ಒಳ ಹರಿವಿನ ಪ್ರಮಾಣ ಹೆಚ್ಚಾಗುತ್ತಿರುವುದು ಸಂತಸ ತಂದಿದೆ. ಜಿಲ್ಲೆಯಲ್ಲಿ ಸುಮಾರು 60 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಭತ್ತ ಬೆಳೆಯುತ್ತಾರೆ. ಆದರೆ, ಈವರೆಗೂ ಭದ್ರಾ ನೀರಾವರಿ ಸಲಹಾ ಸಮಿತಿ ಸಭೆ ಕರೆದಿಲ್ಲ. ತೋಟಗಾರಿಕೆ ಖಾತೆ ಹೊಂದಿರುವ ಜಿಲ್ಲಾ ಉಸ್ತುವಾರಿ ಸಚಿವರಾಗಲೀ ಮತ್ತು ಜಿಲ್ಲೆಯ ಶಾಸಕರಾಗಲೀ ಇದುವರೆಗೂ ಏಕೆ ಈ ಬಗ್ಗೆ ಚಕಾರವೆತ್ತಿಲ್ಲ ಎಂದು ರೈತರ ಒಕ್ಕೂಟ ಪ್ರಶ್ನಿಸಿದೆ.

ಭದ್ರಾ ಅಚ್ಚುಕಟ್ಟು ಪ್ರದೇಶದ ಜಿಲ್ಲೆಯ ಅರ್ಧದಷ್ಟು ರೈತರು, ಬೇರೆ ಮೂಲಗಳ ನೀರು ಬಳಸಿ, ಈಗಾಗಲೇ ಭತ್ತದ ಸಸಿ ಬೆಳೆಸಿಕೊಂಡಿದ್ದಾರೆ. ಇನ್ನುಳಿದ ಅರ್ಧದಷ್ಟು ರೈತರು ಭದ್ರಾ ನೀರು ಹರಿಸಿದ ಮೇಲೆ ಬೀಜ ಚೆಲ್ಲುವವರಿದ್ದಾರೆ. ಮುಂಗಡವಾಗಿ ಸಸಿ ಬೆಳೆಸಿಕೊಂಡವರಿಗೂ ತಡವಾಗಿ ಸಸಿ ಬೆಳೆಸಿಕೊಳ್ಳುವವರಿಗೂ ಎರಡು ತಿಂಗಳ ಅವಧಿಯ ಅಂತರವಾಗುತ್ತದೆ. ಮುಂದೆ ಭತ್ತ ಕಟಾವು ಅವಧಿಯಲ್ಲಿ ಎರಡು ತಿಂಗಳು ಹೆಚ್ಚುವರಿಯಾಗಿ ನೀರು ಹರಿಸಬೇಕಾಗುತ್ತದೆ. ಆದ್ದರಿಂದ ಆಗಸ್ಟ್ 1ನೇ ತಾರೀಖಿನಿಂದ ನಾಲೆಗಳಿಗೆ ನೀರು ಹರಿಸಬೇಕು ಎಂದು ಆಗ್ರಹಿಸಿದರು.

ನಮ್ಮ ಡ್ಯಾಂನ ಕಳೆದ 60 ವರ್ಷಗಳ ಇತಿಹಾಸ ಪರಿಶೀಲಿಸಿದಾಗ ಅಕ್ಟೋಬರ್-ನವೆಂಬರ್ ತಿಂಗಳಲ್ಲಿ ತುಂಬಿರುವ ಉದಾಹರಣೆ ಹೆಚ್ಚು ಇದೆ. ಇದು ಮಳೆಗಾಲವಾಗಿರುವುದರಿಂದ ನೀರಿನ ಸಂಗ್ರಹ ನೋಡಿಕೊಂಡು ವೇಳಾಪಟ್ಟಿ ಪ್ರಕಾರ ನೀರು ಹರಿಸಬೇಕು. ಬೇಸಿಗೆಯಲ್ಲಿ ಮಾತ್ರ ನಿರಂತರ ನೀರು ಹರಿಸಬೇಕು ಎಂದು ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದ ರೈತ ಒಕ್ಕೂಟದ ಸದಸ್ಯರು ಒತ್ತಾಯಿಸಿದರು.

ಮನವಿ ಪತ್ರ ಸ್ವೀಕರಿಸಿದ ಜಿಲ್ಲಾಧಿಕಾರಿ ವೆಂಕಟೇಶ್ ಅವರು, ಈ ಬಗ್ಗೆ ಪರಿಶೀಲಿಸಿ, ರೈತರಿಗೆ ಭತ್ತ ಬೆಳೆಯಲು ಅನುಕೂಲವಾಗುವಂತೆ ಶೀಘ್ರದಲ್ಲೇ ನೀರು ಹರಿಸಲು ತೀರ್ಮಾನಿಸಲಾಗುವುದು. ರೈತರ ಹಿತಾಸಕ್ತಿಗೆ ಆದ್ಯತೆ ನೀಡಲಾಗುವುದು ಎಂದು ಭರವಸೆ ನೀಡಿದರು.

ರೈತ ಒಕ್ಕೂಟದ ನಿಯೋಗದಲ್ಲಿ ಮುಖಂಡರಾದ ಕೊಳೇನಹಳ್ಳಿ ಬಿ. ಎಂ. ಸತೀಶ್, ಬೆಳವನೂರು ನಾಗೇಶ್ವರರಾವ್, ಮಳಲ್ಕೆರೆ ಸದಾನಂದ, ಅತ್ತಿಗೆರೆ ದೇವರಾಜ್, ಗೋಪನಾಳ್ ಹೆಚ್.ಕೆ.ಪಾಲಾಕ್ಷಪ್ಪ, ಆರನೇಕಲ್ಲು ವಿಜಯ ಕುಮಾರ್, ಬಲ್ಲೂರು ಬಸವರಾಜ, ಗೋಪನಾಳ್ ಅಶೋಕ್, ಗೋಣಿವಾಡದ ಪಿ.ಎ.ನಾಗರಾಜಪ್ಪ, ಆಲೂರು ಲಿಂಗರಾಜು, ಲೋಕಿಕೆರೆ ಕೆ. ಎನ್. ತಿಪ್ಪೇಸ್ವಾಮಿ, ತುರ್ಚಘಟ್ಟದ ಪುಟ್ಟರಾಜು, ಗೋಣಿವಾಡದ ಚನ್ನಾಚಾರಿ ಮುಂತಾದವರಿದ್ದರು

ಈ ಸಂದರ್ಭದಲ್ಲಿ ರೈತ ಒಕ್ಕೂಟದ ವತಿಯಿಂದ ನೂತನ ಜಿಲ್ಲಾಧಿಕಾರಿಗಳಿಗೆ ಹಸಿರು ಶಾಲು ಹೊದಿಸಿ, ಸನ್ಮಾನಿಸಲಾಯಿತು.

# 2025 ಕ್ಕೆ ಕ್ಷಯಮುಕ್ತ ಭಾರತದ ಗುರಿ

**ಕ್ಷಯ ರೋಗಿಗಳಿಗೆ ಪೌಷ್ಟಿಕ ಆಹಾರದಿಂದ ರೋಗ ನಿವಾರಣೆ ಸಾಧ್ಯ : ಜಿಲ್ಲಾಧಿಕಾರಿ**

ದಾವಣಗೆರೆ, ಜು. 28- ದುಶ್ಚಟಗಳಿಂದ ದೂರ ಇದ್ದು, ಪೌಷ್ಟಿಕ ಆಹಾರವನ್ನು ಸೇವನೆ ಮಾಡುವುದರಿಂದ ಕ್ಷಯರೋಗವನ್ನು ವಾಸಿ ಮಾಡಬಹುದಾಗಿದೆ ಎಂದು ಜಿಲ್ಲಾಧಿಕಾರಿ ಡಾ.ವೆಂಕಟೇಶ್ ಎಂ.ವಿ ತಿಳಿಸಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಇಂದು ನಡೆದ ಕ್ಷಯರೋಗ ನಿರ್ಮೂಲನಾ ಕಾರ್ಯಕ್ರಮದ ಜಿಲ್ಲಾ ಕ್ಷಯ ವೇದಿಕೆಯ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಕ್ಷಯರೋಗವು ನಿವಾರಣೆಯಾಗಬಹುದಾದ ಕಾಯಿಲೆಯಾಗಿದ್ದು, ರೋಗಿಗಳು ಮದ್ಯಪಾನ, ಧೂಮಪಾನ, ತಂಬಾಕು ಸೇವನೆ ಮಾಡುವುದರಿಂದ ದೂರ ಇದ್ದು, ಕ್ರಮಬದ್ಧವಾಗಿ ಚಿಕಿತ್ಸೆ ಪಡೆದು ಪೌಷ್ಟಿಕ ಆಹಾರಗಳನ್ನು ಉಪಯೋಗಿಸುವುದರಿಂದ ಕ್ಷಯದಿಂದ ಮುಕ್ತಿ ಹೊಂದಬಹುದಾಗಿದೆ ಎಂದರು.

ಕ್ಷಯ ಪರೀಕ್ಷೆ ಮಾಡಲು ಜಿಲ್ಲೆಯ ಎಲ್ಲಾ 95 ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಮೈಕ್ರೋಸ್ಕೋಪಿಕ್ ಕೇಂದ್ರ, ತಾಲ್ಲೂಕು ಆಸ್ಪತ್ರೆಗಳಲ್ಲಿ ನ್ಯಾಟ್ ಕೇಂದ್ರಗಳಿದ್ದು, ಇವುಗಳ ಮೂಲಕ ಕ್ಷಯ ಪರೀಕ್ಷೆ ಮಾಡಲಾಗುತ್ತದೆ. 2023 ರ ಜನವರಿಯಿಂದ ಜೂನ್ ವರೆಗೆ 2244 ಜನರನ್ನು ಗುರುತಿಸಲಾಗಿದೆ ಮತ್ತು ಖಾಸಗಿ ಆಸ್ಪತ್ರೆಗಳಿಂದ 248, ಸಾರ್ವಜನಿಕ ವಲಯದ ಆಸ್ಪತ್ರೆಗಳಿಂದ 1108 ಸೇರಿ 1356 ಕ್ಷಯ ರೋಗಿಗಳನ್ನು ಜಿಲ್ಲೆಯಲ್ಲಿ ಪತ್ತೆ ಹಚ್ಚಲಾಗಿದೆ.

ಜಿಲ್ಲೆಯಲ್ಲಿ ಪ್ರಸ್ತುತ 1219 ಕ್ಷಯರೋಗದಿಂದ ಬಳಲುತ್ತಿರುವವರಿದ್ದು, ಇದರಲ್ಲಿ 54 ಜನರು ಹೆಚ್‌ಐವಿ ಸೋಂಕಿನಿಂದ ಬಳಲುತ್ತಿದ್ದು, 205 ಮಧುಮೇಹದಿಂದ ಬಳಲುತ್ತಿದ್ದಾರೆ. ಕ್ಷಯ ಪೀಡಿತರಲ್ಲಿ 134 ಜನರು ಮದ್ಯಪಾನಮಾಡುವುದರಿಂದ ಕ್ಷಯರೋಗಿಗಳಾಗಿದ್ದಾರೆ ಮತ್ತು 194 ಜನರು ತಂಬಾಕು, ಧೂಮಪಾನ ಸೇವನೆಯಿಂದ ಕ್ಷಯರೋಗಿಗಳಾಗಿದ್ದಾರೆ. ತಾಲ್ಲೂಕುವಾರು ವಿವರದನ್ವಯ ಚನ್ನಗಿರಿ 148, ದಾವಣಗೆರೆ ಗ್ರಾಮೀಣ 162, ನಗರ 532, ಹರಿಹರ 136, ಹೊನ್ನಾಳಿ 109, ಜಗಳೂರು 132 ಜನರಿದ್ದಾರೆ.

ಕೇಂದ್ರ ಸರ್ಕಾರದ ನಿಕ್ಷಯ್ ಯೋಜನೆಯಡಿ ಪ್ರತಿ ರೋಗಿಗೆ ಚಿಕಿತ್ಸಾ ಅವಧಿಯಲ್ಲಿ ತಿಂಗಳಿಗೆ ರೂ.500 ಪ್ರೋತ್ಸಾಹ ಧನ ನೀಡಲಾಗುತ್ತದೆ. ಇದನ್ನು ಅವರ ಬ್ಯಾಂಕ್ ಖಾತೆಗೆ ನೇರವಾಗಿ ಜಮಾ ಮಾಡಲಾಗುತ್ತದೆ. ಕ್ಷಯ ರೋಗ ಪೀಡಿತರು ಯಾವುದೇ ರೀತಿಯ ಮಾನಸಿಕವಾಗಿ ಖಿನ್ನತೆಗೆ ಒಳಗಾಗದೇ ನಿರಂತರವಾಗಿ ಚಿಕಿತ್ಸೆ ಪಡೆಯುವುದರಿಂದ ಬೇಗ ಗುಣಮುಖರಾಗಬಹುದಾಗಿದೆ. 2025 ಕ್ಕೆ ಕ್ಷಯ ಮುಕ್ತ ಭಾರತವನ್ನಾಗಿಸುವ ಗುರಿ ಹೊಂದಲಾಗಿದ್ದು ಜಿಲ್ಲೆಯಲ್ಲಿಯೂ ಕ್ಷಯ ಮುಕ್ತ ಗ್ರಾಮಗಳನ್ನಾಗಿ ಘೋಷಣೆ ಮಾಡಲು ಸಮೀಕ್ಷೆ ಕಾರ್ಯವನ್ನು ಮಾಡಿಸಲಾಗುತ್ತದೆ ಎಂದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸುರೇಶ್ ಇಟ್ನಾಳ್ ಮಾತನಾಡಿ, ಚನ್ನಗಿರಿ ತಾಲ್ಲೂಕಿನಲ್ಲಿ ಅಪೌಷ್ಟಿಕತೆ ಮತ್ತು ಕ್ಷಯದಿಂದ ಬಳಲುತ್ತಿರುವವರ ಸಂಖ್ಯೆ ಹೆಚ್ಚಿದ್ದು, ಹೆಚ್ಚಿನ ನಿಗಾವಹಿಸಬೇಕು. ಎಲ್ಲಾ ತಾಲ್ಲೂಕು ಆರೋಗ್ಯಾಧಿಕಾರಿಗಳು ಮತ್ತು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಆರೋಗ್ಯ ಸುಧಾರಣೆಗೆ ಅಗತ್ಯವಿರುವ ಕ್ರಮಗಳನ್ನು ಕೈಗೊಳ್ಳಬೇಕೆಂದು ಸೂಚನೆ ನೀಡಿದರು.

ಸಭೆಯಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ನಾಗರಾಜ್, ಕ್ಷಯರೋಗ ನಿರ್ಮೂಲನಾಧಿಕಾರಿ ಡಾ. ಕೆ.ಹೆಚ್.ಗಂಗಾಧರ ಹಾಗೂ ವಿವಿಧ ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದರು.

# ಕರ್ನಾಟಕ ಶಿಕ್ಷಣ ನೀತಿ ಜಾರಿ

**(1ನೇ ಪುಟದಿಂದ)** ಸಭೆ ನಡೆಸಿ ಎನ್‌ಇಪಿ ರದ್ದುಪಡಿಸುವ ತೀರ್ಮಾನ ಕೈಗೊಂಡಿರುವುದಲ್ಲದೆ, ಮುಂದಿನ ಶೈಕ್ಷಣಿಕ ವರ್ಷಕ್ಕೆ ಕರ್ನಾಟಕ ಶಿಕ್ಷಣ ನೀತಿಯಡಿ ಹೊಸ ಪಠ್ಯ-ಪುಸ್ತಕಗಳನ್ನು ನೀಡಲು ತೀರ್ಮಾನಿಸಿದ್ದಾರೆ.

ಸಂಪುಟದ ಒಪ್ಪಿಗೆ ಪಡೆದು ತಜ್ಞರ ಸಮಿತಿ ನೇಮಕ ಮಾಡಿ, ನೀತಿ ಹಾಗೂ ಹೊಸ ಪಠ್ಯದ ಬಗ್ಗೆ ವರದಿ ಪಡೆಯಲಿದ್ದಾರೆ.

ತಜ್ಞರ ವರದಿ ಬಂದ ನಂತರ ಪಠ್ಯ ಪರಿಷ್ಕರಣೆ ಮಾಡಲಾಗುತ್ತದೆ. ಎನ್‌ಇಪಿಯು ಶಿಕ್ಷಣದ ಸರ್ವತೋಮುಖ ಕೇಂದ್ರೀಕರಣ, ವ್ಯಾಪಾರೀಕರಣ, ಕೋಮು ವರ್ಗೀಕರಣದ ಗುರಿ ಹೊಂದಿದೆ. ಇದು ಶಿಕ್ಷಣದ ಸ್ವಾಯತ್ತತೆ, ನಮ್ಮ ಒಕ್ಕೂಟದ ವ್ಯವಸ್ಥೆ, ಪ್ರಜಾ ತಾಂತ್ರಿಕ, ವೈಜ್ಞಾನಿಕ, ಧರ್ಮನಿರಪೇಕ್ಷ ಶಿಕ್ಷಣದ ಮೇಲಿನ ದಾಳಿಯಾಗಿದೆ ಎಂದು ಕಾಂಗ್ರೆಸ್ ಹಾಗೂ ಅದರ ಅಂಗ ಸಂಸ್ಥೆಗಳು ಅಭಿಪ್ರಾಯ ಪಟ್ಟಿದ್ದವು. 2020ರ ಈ ನೀತಿಯು ಪೂರ್ವ ಪ್ರಾಥಮಿಕ ಹಂತದಿಂದಲೇ ಇಡೀ ಶಿಕ್ಷಣ ವ್ಯವಸ್ಥೆಯ ವ್ಯಾಪಾರೀಕರಣ ಮತ್ತು ಕೋಮುವಾದೀಕರಣ ಹೊಂದಿದೆ ಎಂದು ಕಾಂಗ್ರೆಸ್ ಆರೋಪಿಸಿತ್ತು. ಇದೇ ವಿಚಾರ ಮುಂದಿಟ್ಟುಕೊಂಡು ರಾಜ್ಯ ಸರ್ಕಾರ ರದ್ದುಪಡಿಸಿ, ಹೊಸ ನೀತಿ ರೂಪಿಸಿ ಜಾರಿಗೊಳಿಸಲು ಮುಂದಾಗಿದೆ.

ಹಿಂದಿನ ಸರ್ಕಾರ ಪಠ್ಯಪುಸ್ತಕ ಮರು ಪರಿಷ್ಕರಣೆ ಹೆಸರಿನಲ್ಲಿ ಅಸಹಿಷ್ಣುತೆ, ಪ್ರತಿಗಾಮಿ ಚಿಂತನೆ ಹಾಗೂ ಕೋಮುವಾದಿ ಚಿಂತನೆಗಳನ್ನು ಸೇರಿಸಿದ್ದಾರೆ ಎಂಬ ವಾದವನ್ನು ಅಂದು ವಿರೋಧ ಪಕ್ಷದಲ್ಲಿದ್ದ ಕಾಂಗ್ರೆಸ್ ಮಾಡಿತ್ತು.

ಅಧಿಕಾರಕ್ಕೆ ಬರುತ್ತಿದ್ದಂತೆ ಬಿಜೆಪಿ ಆಡಳಿತದಲ್ಲಿ ತೆಗೆದುಕೊಂ ಡಿದ್ದ ಕೆಲವು ಪ್ರಮುಖ ನಿರ್ಧಾರಗಳಿಗೆ ಬಜೆಟ್ ಅಧಿವೇಶನದಲ್ಲಿ ತಿದ್ದುಪಡಿ ತಂದು ಕಾಯ್ದೆಗಳನ್ನು ಜಾರಿಗೊಳಿಸಿದೆ. ಇದೀಗ ಉನ್ನತ ಶಿಕ್ಷಣದಲ್ಲಿ ಮಹತ್ತರ ಬದಲಾವಣೆಗೆ ಸರ್ಕಾರ ಹೆಜ್ಜೆ ಇಟ್ಟಿದೆ.

# ಜಿಲ್ಲೆಯಲ್ಲಿ 1.6 ಮಿ.ಮೀ. ಸರಾಸರಿ ಮಳೆ : 26.41 ಲಕ್ಷ ರೂ. ನಷ್ಟು ಹಾನಿ

ದಾವಣಗೆರೆ, ಜು. 28- ಜಿಲ್ಲೆಯಲ್ಲಿ ಜುಲೈ 27 ರಂದು ಬಿದ್ದ ಮಳೆಯ ವಿವರದನ್ವಯ 1.6 ಮಿ.ಮೀ. ಸರಾಸರಿ ಮಳೆಯಾಗಿದೆ. ಅಧಿಕ ಮಳೆಯಿಂದ ರೂ. 26.41 ಲಕ್ಷ ಅಂದಾಜು ನಷ್ಟ ಸಂಭವಿಸಿದೆ.

ತಾಲ್ಲೂಕುವಾರು ಮಳೆ ಹಾಗೂ ಹಾನಿ ವಿವರ ಈ ಕೆಳಕಂಡಂತಿದೆ.

ಚನ್ನಗಿರಿಯಲ್ಲಿ ವಾಡಿಕೆ ಮಳೆ 6.3 ಮಿ.ಮೀ ಹಾಗೂ ವಾಸ್ತವ ಮಳೆ 2.3 ಮಿ.ಮೀ, ದಾವಣಗೆರೆ ತಾಲ್ಲೂಕಿನಲ್ಲಿ ವಾಡಿಕೆ ಮಳೆ 2.8 ಮಿ.ಮೀ ಹಾಗೂ ವಾಸ್ತವ ಮಳೆ 2.1 ಮಿ.ಮೀ, ಹರಿಹರದಲ್ಲಿ ವಾಡಿಕೆ ಮಳೆ 2.1 ಮಿ.ಮೀ ಹಾಗೂ ವಾಸ್ತವ ಮಳೆ 1.2 ಮಿ.ಮೀ, ಹೊನ್ನಾಳಿ ವಾಡಿಕೆ ಮಳೆ 3.8 ಮಿ.ಮೀ ಹಾಗೂ ವಾಸ್ತವ ಮಳೆ 1.3 ಮಿ.ಮೀ, ಜಗಳೂರು ವಾಡಿಕೆ ಮಳೆ 1.5 ಮಿ.ಮೀ ಹಾಗೂ ವಾಸ್ತವ ಮಳೆ 0.3 ಮಿ.ಮೀ, ನ್ಯಾಮತಿಯಲ್ಲಿ ವಾಡಿಕೆ ಮಳೆ 6.1 ಮಿ.ಮೀ ಹಾಗೂ ವಾಸ್ತವ ಮಳೆ 1.8 ಮಿ.ಮೀ ಮಳೆಯಾಗಿದೆ.

ದಾವಣಗೆರೆ ತಾಲ್ಲೂಕು ವ್ಯಾಪ್ತಿಯಲ್ಲಿ 8 ಮನೆಗಳು ಭಾಗಶಃ ಹಾನಿಯಾಗಿದ್ದು ರೂ. 2.40 ಲಕ್ಷ ಅಂದಾಜು ನಷ್ಟ ಸಂಭವಿಸಿದೆ.

ಹರಿಹರ ತಾಲ್ಲೂಕು ವ್ಯಾಪ್ತಿಯಲ್ಲಿ 1 ಮನೆ ತೀವ್ರ ಹಾನಿಯಾಗಿದ್ದು ಅಂದಾಜು ರೂ.2.00 ಲಕ್ಷ ಹಾಗೂ 4 ಮನೆ ಭಾಗಶಃ ಹಾನಿಯಾಗಿದ್ದು ರೂ. 1.20 ಲಕ್ಷ ಅಂದಾಜು ನಷ್ಟ ಸಂಭವಿಸಿದೆ.

ಜಗಳೂರು ತಾಲ್ಲೂಕು ವ್ಯಾಪ್ತಿಯಲ್ಲಿ 4 ಮನೆಗಳು ಭಾಗಶಃ ಹಾನಿಯಾಗಿದ್ದು ರೂ. 26 ಸಾವಿರ ಸಾವಿರ ಅಂದಾಜು ನಷ್ಟ ಸಂಭವಿಸಿದೆ.

ಹೊನ್ನಾಳಿ ತಾಲ್ಲೂಕು ವ್ಯಾಪ್ತಿಯಲ್ಲಿ 1 ಮನೆ ತೀವ್ರ ಹಾನಿಯಾಗಿದ್ದು, ಅಂದಾಜು ರೂ. 3 ಲಕ್ಷ ಹಾಗೂ 1 ಮನೆ ಭಾಗಶಃ ಹಾನಿಯಾಗಿದ್ದು ರೂ. 90 ಸಾವಿರ ಅಂದಾಜು ನಷ್ಟ ಸಂಭವಿಸಿರುತ್ತದೆ.

ನ್ಯಾಮತಿ ತಾಲ್ಲೂಕು ವ್ಯಾಪ್ತಿಯಲ್ಲಿ 1 ಮನೆ ಭಾಗಶಃ ಹಾನಿಯಾಗಿದ್ದು ರೂ. 50 ಸಾವಿರ ಹಾಗೂ 1 ದನದ ಕೊಟ್ಟಿಗೆಗೆ ಹಾನಿಯಾಗಿ ರೂ. 5 ಸಾವಿರ ಅಂದಾಜು ನಷ್ಟ ಸಂಭವಿಸಿದೆ.

ಚನ್ನಗಿರಿ ತಾಲ್ಲೂಕು ವ್ಯಾಪ್ತಿಯಲ್ಲಿ 8 ಮನೆ ತೀವ್ರ ಹಾನಿಯಾಗಿದ್ದು, ಅಂದಾಜು ರೂ.12.50 ಲಕ್ಷ ಹಾಗೂ 9 ಮನೆ ಭಾಗಶಃ ಹಾನಿಯಾಗಿದ್ದು, ರೂ. 3.60 ಲಕ್ಷ ಅಂದಾಜು ನಷ್ಟ ಸಂಭವಿಸಿದೆ.

ಜಿಲ್ಲೆಯಲ್ಲಿ ಒಟ್ಟಾರೆ ರೂ.26.41 ಲಕ್ಷ ಅಂದಾಜು ನಷ್ಟ ಸಂಭವಿಸಿರುತ್ತದೆ. ಸರ್ಕಾರದ ಮಾರ್ಗಸೂಚಿ ಅನ್ವಯ ಸಂತ್ರಸ್ತರಿಗೆ ಪರಿಹಾರ ವಿತರಿಸಲು ಕ್ರಮ ವಹಿಸಲಾಗುವುದೆಂದು ಜಿಲ್ಲಾಧಿಕಾರಿ ಡಾ. ವೆಂಕಟೇಶ್ ಎಂ.ವಿ ತಿಳಿಸಿದ್ದಾರೆ.

# ಪ್ಲಾಸ್ಟಿಕ್ ಧ್ವಜಗಳ ಮಾರಾಟ ನಿಷೇಧ

ದಾವಣಗೆರೆ, ಜು.28- ಆಗಸ್ಟ್ 15 ರಂದು ಆಚರಿಸಲಿರುವ ಸ್ವಾತಂತ್ರ್ಯೋತ್ಸವ ದಿನಾಚರಣೆಯಲ್ಲಿ ಪ್ಲಾಸ್ಟಿಕ್ ಧ್ವಜ ಮಾರಾಟ ಮತ್ತು ಉಪಯೋಗಿಸದಂತೆ ಪರಿಸರ ಅಧಿಕಾರಿ ಡಾ.ಹೆಚ್ ಲಕ್ಷ್ಮೀಕಾಂತ ತಿಳಿಸಿದ್ದಾರೆ. ಪ್ಲಾಸ್ಟಿಕ್ ಧ್ವಜ ಮಾರಾಟ ಮಾಡುವಂತಹ ಅಂಗಡಿ ಮಾಲೀಕರುಗಳ ವಿರುದ್ಧ ಪ್ಲಾಸ್ಟಿಕ್ ಹಾಗೂ ಪರಿಸರ ಸಂರಕ್ಷಣಾ ಕಾಯ್ದೆಯಡಿಯಲ್ಲಿ ಕಾನೂನು ರೀತ್ಯಾ ಕ್ರಮಕೈಗೊಳ್ಳಲಾಗುವುದು.

# ನಗರದಲ್ಲಿ ಇಂದು - ನಾಳೆ ಸಚಿವ ಎಸ್ಸೆಸ್ಸೆಂ

ಗಣಿ ಮತ್ತು ಭೂ ವಿಜ್ಞಾನ, ತೋಟಗಾರಿಕೆ ಹಾಗೂ ಜಿಲ್ಲಾ ಉಸ್ತವಾರಿ ಸಚಿವರಾದ ಎಸ್. ಎಸ್. ಮಲ್ಲಿಕಾರ್ಜುನ್ ಅವರು ಇಂದು - ನಾಳೆ ಜಿಲ್ಲೆಯಲ್ಲಿ ಪ್ರವಾಸ ಕೈಗೊಳ್ಳಲಿದ್ದಾರೆ. ಇಂದು ಮತ್ತು ನಾಳೆ ಸಾರ್ವಜನಿಕರ ಭೇಟಿ ಮತ್ತು ಕುಂದು ಕೊರತೆಗಳ ವಿಚಾರಣೆ ಹಾಗೂ ದಾವಣಗೆರೆ ಮತಕ್ಷೇತ್ರ ವ್ಯಾಪ್ತಿಯ ಸ್ಥಳೀಯ ಕಾರ್ಯಕ್ರಮಗಳಲ್ಲಿ ಸಚಿವರು ಭಾಗವಹಿಸುವರು.

# ಹರಿಹರ : ವರ್ಗಾವಣೆಯಾದ ತಾಲ್ಲೂಕು ಪಂಚಾಯ್ತಿ ವ್ಯವಸ್ಥಾಪಕಿ ಪೂಜಾಗೆ ಸನ್ಮಾನ



ಹರಿಹರ, ಜು. 28 - ನಗರದ ತಾ.ಪಂ. ಕಚೇರಿಯ ವ್ಯವಸ್ಥಾಪಕರಾದ ಆರ್.ಜಿ. ಪೂಜಾ ಅವರು ದಾವಣಗೆರೆ ಜಿಲ್ಲಾ ಪಂಚಾಯತಿ ಕಚೇರಿಗೆ ವರ್ಗಾವಣೆಯಾಗಿದ್ದು, ತಾ.ಪಂ. ಕಚೇರಿಯ ಅಧಿಕಾರಿಗಳು ಮತ್ತು ಸಿಬ್ಬಂದಿಗಳು, ಮತ್ತು ತಾಲ್ಲೂಕು ಪಿ.ಡಿ.ಓ. ಸಿಬ್ಬಂದಿಗಳು ಅವರನ್ನು ಸನ್ಮಾನಿಸಿ ಬೀಳ್ಕೊಟ್ಟರು.

ಈ ಸಂದರ್ಭದಲ್ಲಿ ತಾ.ಪಂ. ಇಓ ರವಿಕುಮಾರ್, ಐ.ಸಿ. ವಿದ್ಯಾವತಿ, ಲಿಂಗರಾಜ್, ಮಂಜುಳಾ, ವಿಜಯಲಕ್ಷ್ಮಿ, ರಾಘವೇಂದ್ರ, ಸಿರಿನ್ ತಾಜ್ ಹಾಗೂ ಇತರರು ಹಾಜರಿದ್ದರು.

# ರೇಷ್ಮೆ ಬೆಳೆಗಾರರಲ್ಲಿ ಜಾಗೃತಿ ಮೂಡಿಸಲು ಕರೆ




**ಹರಪನಹಳ್ಳಿ**

ಹರಪನಹಳ್ಳಿ, ಜು. 28 - ಬಯಲುಸೀಮೆ ಭಾಗದ ರೇಷ್ಮೆ ಬೆಳೆಗಾರರು ಬೆಳೆಯುವ ರೇಷ್ಮೆ ಗೂಡು ಉತ್ಪಾದನೆ ಹೆಚ್ಚು ಮಾಡುವುದು. ಉತ್ಪಾದನೆಗೆ ತಕ್ಕಂತೆ ಮಾರುಕಟ್ಟೆ ವ್ಯವಸ್ಥೆ ಹಾಗೂ ಮಧ್ಯವರ್ತಿಗಳ ಹಾವಳಿ ತಪ್ಪಿಸುವ ಉದ್ದೇಶದಿಂದ ರೈತ ಆಸಕ್ತ ಗುಂಪುಗಳನ್ನು ರಚಿಸಲಾಗುತ್ತಿದೆ ಎಂದು ರೇಷ್ಮೆ ಇಲಾಖೆಯ ಉಪನಿರ್ದೇಶಕ ವಿ.ಸುದೀರ್ ಹೇಳಿದರು.

ತಾಲ್ಲೂಕಿನ ಗೋವೇರಹಳ್ಳಿ ಗ್ರಾಮದಲ್ಲಿ ರೇಷ್ಮೆ ಇಲಾಖೆ ಮತ್ತು ರೈತ ಆಸಕ್ತ ಇವರ ಸಹಯೋಗದಲ್ಲಿ ರೇಷ್ಮೆ ಉತ್ಪಾದಕ ಸಂಸ್ಥೆ ಯೋಜನೆಯ ಅಡಿಯಲ್ಲಿ ಆಸಕ್ತ ಗುಂಪುಗಳ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ರೇಷ್ಮೆ ರೈತರು ತಮ್ಮ ಚಾಕಿ ಕೇಂದ್ರದ ಮೂಲಕ ಅತ್ಯುತ್ತಮ ಗುಣಮಟ್ಟದ ಹುಳುಗಳನ್ನು ಕೊಡುವುದರ ಜೊತೆಗೆ ರೈತರ ತೋಟಗಳಿಗೆ ನುರಿತ ತಂಡದ ವ್ಯಕ್ತಿಗಳಿಂದ ಭೇಟಿ ನೀಡಿಸಿ ಸೂಕ್ತ ಸಲಹೆ ಸೂಚನೆಗಳನ್ನು ತಿಳಿದು ಕೊಂಡು ಉತ್ತಮವಾದ ರೇಷ್ಮೆ ಬೆಳೆಗಳ ಗೂಡುಗಳನ್ನು ಇಳುವರಿ ಪಡೆಯಲು ಸಹಕರಿಸುವುದಕ್ಕೆ ಸಹಾಯವಾಗುತ್ತದೆ ಎಂದರು. ರೈತರಿಗೆ ನೂತನ ತಾಂತ್ರಿಕತೆ ಹಾಗೂ ಕೌಶಲ್ಯ ಅಭಿವೃದ್ಧಿ ತರಬೇತಿ ನೀಡುವುದು ರೇಷ್ಮೆ ಬೆಳೆಗಾರರಲ್ಲಿ ಜಾಗೃತಿ ಮೂಡಿಸುವುದು ಸೇರಿದಂತೆ ಮಧ್ಯವರ್ತಿಗಳ ಹಾವಳಿ ತಡೆಯುವುದು ಈ ಯೋಜನೆಯ ಮೂಲ ಉದ್ದೇಶವಾಗಿದೆ. ಎಂದರು.

ಈ ಸಂದರ್ಭದಲ್ಲಿ ರೇಷ್ಮೆ ಇಲಾಖೆಯ ವಿಸ್ತರಣಾಧಿಕಾರಿ ಎಂ.ಡಿ.ಲಕ್ಷ್ಮಿನಾರಾಯಣ, ಇಲಾಖೆ ಅಧಿಕಾರಿ ಗಳಾದ ಕೆ. ನಾಗರಾಜ್, ಎಸ್.ಕುಮಾರ ಸ್ವಾಮಿ, ಡಾ. ಜೆ.ಸೋಮಿರೆಡ್ಡಿ, ಡಾ. ಎಂ.ಆರ್.ಸುಬ್ರಮಣಂ. ಡಾ; ನಾಗರಾಜ ಗೌಡ, ಡಾ. ಮೇಗೇರಿ ಕರಿಬಸಪ್ಪ ಡಾ; ಎಂ.ವಿ. ಕಿರಣ್ ಮಾತನಾಡಿದರು. ಗೋವೇರಹಳ್ಳಿ ಗ್ರಾಮ ಮುಖಂಡರಾದ ಕೊಟ್ರೇಶ್ ಹಿರೇ ಮಠ, ಸೇರಿದಂತೆ ಇತರರು ಭಾಗವಹಿಸಿದ್ದರು.

# ಖನಿಜ ಶೋಧನೆಗೆ ಖಾಸಗಿಯವರಿಗೆ ಅವಕಾಶ; ಮಸೂದೆಗೆ ಅಂಗೀಕಾರ

ನವದೆಹಲಿ, ಜು. 28 - ಖನಿಜಗಳ ಶೋಧನೆಯಲ್ಲಿ ಖಾಸಗಿಯವರಿಗೆ ಅವಕಾಶ ನೀಡುವ ಮಸೂದೆಗೆ ಲೋಕಸಭೆ ಅಂಗೀಕಾರ ನೀಡಿದೆ. ಕೆಲ ಮಹತ್ವದ ಖನಿಜಗಳ ಗಣಿಗಾರಿಕೆಯನ್ನು ಹರಾಜಿನ ಮೂಲಕ ವಿತರಿಸಲೂ ಮಸೂದೆಯಲ್ಲಿ ಅವಕಾಶವಿದೆ.

ಕೇಂದ್ರ ಗಣಿಗಾರಿಕೆ ಸಚಿವ ಪ್ರಹ್ಲಾದ್ ಜೋಷಿ ಅವರು ಮಸೂದೆ ಮಂಡಿಸಿ ಮಾತನಾಡಿ, ನಾವು 1 ಶತಕೋಟಿ ಟನ್ ಕಲ್ಲಿದ್ದಲು ಉತ್ಪಾದಿಸುವ ಗುರಿ ಹೊಂದಿದ್ದೇವೆ.ಇದರಿಂದ ಇಂಧನ ವಲಯದಲ್ಲಿ ಭಾರತ ಸ್ವಾವಲಂಬಿಯಾಗಲಿದೆ ಎಂದರು.

2025-26ರ ವೇಳೆಗೆ ಕಲ್ಲಿದ್ದಲು ಆಮದು ನಿಲ್ಲಿಸಲು ನಾವು ನಿರ್ಧರಿಸಿದ್ದೇವೆ ಎಂದು ಸಚಿವರು ಹೇಳಿದರು. ಮಣಿಪುರ ವಿಷಯಕ್ಕೆ ಸಂಬಂಧಿಸಿದಂತೆ ಪ್ರತಿಪಕ್ಷಗಳು ಗದ್ದಲ ನಡೆಸುತ್ತಿರುವ ಮಧ್ಯೆ ಮಸೂದೆಯನ್ನು ಮತಕ್ಕೆ ಹಾಕಿ ಅಂಗೀಕಾರ ಪಡೆಯಲಾಯಿತು.

# ನಾಳೆ ಸ್ವಕುಳಸಾಳಿ ಸಮಾಜದ ಸಭೆ

ದಾವಣಗೆರೆ,ಜು.28- ನಗರದ ಸ್ವಕುಳಸಾಳಿ ಸಮಾಜದ ವಾರ್ಷಿಕ ಸರ್ವ ಸದಸ್ಯರ ಮಹಾಸಭೆಯು ಡಾ. ಸದ್ಯೋಜಾತ ಶಿವಾಚಾರ್ಯ ಸ್ವಾಮೀಜಿ ಹಿರೇಮಠದಲ್ಲಿ ನಾಡಿದ್ದು ದಿನಾಂಕ 30ರ ಭಾನುವಾರ ಬೆಳಿಗ್ಗೆ 10 ಗಂಟೆಗೆ ನಡೆಯಲಿದೆ.

ಸ್ವಕುಳಸಾಳಿ ಸಮಾಜದ ಅಧ್ಯಕ್ಷ ಮೋಹನ್ ಪಿ. ಗಾಯಕವಾಡ ಅವರ ಅಧ್ಯಕ್ಷತೆಯಲ್ಲಿ ಏರ್ಪಾಡಾಗಿರುವ ಈ ಸಭೆಯಲ್ಲಿ ಸಮಾಜದ ಶ್ರೇಯೋಭಿವೃದ್ಧಿ ಮತ್ತು ವಿವಿಧ ವಿಷಯಗಳ ಕುರಿತಂತೆ ಚರ್ಚೆ ನಡೆಯಲಿದೆ. ಸ್ವಕುಳಸಾಳಿ ಸಮಾಜ ಬಾಂಧವರು ಸಭೆಯಲ್ಲಿ ಭಾಗವಹಿಸಿ ಯಶಸ್ವಿಗೊಳಿಸುವಂತೆ ಕಾರ್ಯದರ್ಶಿ ಧರ್ಮರಾಜ ವಿ. ಏಕಬೋಟೆ ಕೋರಿದ್ದಾರೆ.

# ಮೂರು ಹಂತದಲ್ಲಿ ಮಿಷನ್ ಇಂದ್ರ ಧನುಷ್ ಲಸಿಕಾಕರಣ

## ಮೀಸೆಲ್, ರೂಬೆಲ್ಲಾ ಮುಕ್ತ ಜಿಲ್ಲೆಯನ್ನಾಗಿಸಲು ಸಾರ್ವಜನಿಕರ ಸಹಭಾಗಿತ್ವ ಅಗತ್ಯ : ಜಿಲ್ಲಾಧಿಕಾರಿ ಡಾ. ಎಂ.ವಿ. ವೆಂಕಟೇಶ್



ದಾವಣಗೆರೆ, ಜು.28- ಮೀಸೆಲ್ ಮತ್ತು ರೂಬೆಲ್ಲಾದಿಂದ ಮುಕ್ತವಾಗಿಸಲು ಮುಂಬರುವ ಆಗಸ್ಟ್, ಸೆಪ್ಟೆಂಬರ್ ಹಾಗೂ ಅಕ್ಟೋಬರ್‌ನಲ್ಲಿ ಮಿಷನ್ ಇಂದ್ರಧನುಷ್ ಲಸಿಕೆ ಹಾಕಲಾಗುತ್ತಿದ್ದು ಸಾರ್ವಜನಿಕರು ಆರೋಗ್ಯ ಇಲಾಖೆಯೊಂದಿಗೆ ಕೈಜೋಡಿಸಬೇಕೆಂದು ಜಿಲ್ಲಾಧಿಕಾರಿ ಡಾ. ಎಂ. ವಿ. ವೆಂಕಟೇಶ್ ಕರೆ ನೀಡಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಮಿಷನ್ ಇಂದ್ರ ಧನುಷ್-5.0 ಅನುಷ್ಠಾನದ ಜಿಲ್ಲಾ ಮಟ್ಟದ ಟಾಸ್ಕ್ ಫೋರ್ಸ್ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಮಕ್ಕಳಲ್ಲಿ ರೋಗ ನಿರೋಧಕ ಶಕ್ತಿ ಹೆಚ್ಚಿಸಲು ಲಸಿಕೆಗಳು ಬಹಳ ಪ್ರಮುಖವಾಗಿದ್ದು, ಲಸಿಕೆಗಳು ಮಗು ಹುಟ್ಟಿನಿಂದ 9 ತಿಂಗಳೊಳಗಾಗಿ ಎಲ್ಲಾ ಅಗತ್ಯವಿರುವ ಚುಚ್ಚುಮದ್ದುಗಳನ್ನು ಹಾಕಬೇಕು. ಮಿಷನ್ ಇಂದ್ರ ಧನುಷ್ ಲಸಿಕೆಯು ವಿವಿಧ 12 ರೋಗ ನಿರೋಧಕ ಶಕ್ತಿಗೆ ಚುಚ್ಚುಮದ್ದು ಇದಾಗಿದೆ. ಯಾವುದೇ ಮಗು ಹುಟ್ಟಿನಿಂದ 1 ವರ್ಷದೊಳಗಾಗಿ ಸಿಗಬೇಕಾದ ಎಲ್ಲಾ ಲಸಿಕೆಗಳು ಸಿಗುವಂತೆ ನೋಡಿಕೊಳ್ಳಬೇಕು. ಏಕೆಂದರೆ ಈ ಅವಧಿಯಲ್ಲಿ ರೋಗ ನಿರೋಧಕ ಶಕ್ತಿ ಹೆಚ್ಚಿಸಲು ಚುಚ್ಚುಮದ್ದುಗಳು ಮಗುವಿನ ಬೆಳವಣಿಗೆಯಲ್ಲಿ ಬಹಳ ಮಹತ್ವವುಳ್ಳದ್ದಾಗಿವೆ. ಈ ಅವಧಿಯಲ್ಲಿ ಲಸಿಕೆ ಹಾಕಿಸಲು ಪ್ರಗತಿ ಕುಂಠಿತವಾಗುವ ಅಧಿಕಾರಿಗಳಿಗೆ ನೋಟಿಸ್ ನೀಡಲು ಸಹ ಸೂಚನೆ ನೀಡಿದರು.

ದಡಾರ-ರೂಬೆಲ್ಲಾ ನಿರ್ಮೂಲನೆಗಾಗಿ ಮಿಷನ್ ಇಂದ್ರ ಧನುಷ್ ಲಸಿಕೆಯನ್ನು ನೀಡಲಾಗುತ್ತಿದ್ದು, ಮೊದಲ ಹಂತದಲ್ಲಿ ಬರುವ ಆಗಸ್ಟ್ 7 ರಿಂದ 12 ರ ವರೆಗೆ ನೀಡಲಾಗುತ್ತಿದೆ ಮತ್ತು ಸೆಪ್ಟೆಂಬರ್‌ನಲ್ಲಿ 11 ರಿಂದ 16 ರ ವರೆಗೆ ಮತ್ತು ಅಕ್ಟೋಬರ್ 9 ರಿಂದ 14 ರ ವರೆಗೆ ಲಸಿಕೆಯನ್ನು ನೀಡಲಾಗುತ್ತಿದೆ. ಈ ಹಿಂದೆ ಲಸಿಕೆಯಿಂದ ಬಿಟ್ಟು ಹೋದಂತಹ ಮಕ್ಕಳು ಯಾರೂ ಸಹ ಹೊರಗುಳಿಯಬಾರದು. ಮಿಷನ್ ಇಂದ್ರ ಧನುಷ್ ಲಸಿಕೆ ಹಾಕುವ ಬಗ್ಗೆ ತಾಲ್ಲೂಕು ಮಟ್ಟದಲ್ಲಿಯೂ ಸಭೆಯನ್ನು ಮಾಡುವ ಮೂಲಕ ಇದು ಹಬ್ಬದೋಪಾದಿಯಲ್ಲಿ ಲಸಿಕಾಕರಣವಾಗುವಂತೆ ನೋಡಿಕೊಳ್ಳಬೇಕು.

ದಡಾರ ಮತ್ತು ರೂಬೆಲ್ಲಾದಿಂದ ಯಾವುದೇ ಮಗು ಮರಣ ಹೊಂದಬಾರದು. ಈ ನಿಟ್ಟಿನಲ್ಲಿ ಎಲ್ಲಾ ಮಕ್ಕಳಿಗೆ ಇಂದ್ರ ಧನುಷ್ ತಲುಪಬೇಕು, ಇದು ಯಾವುದೇ ಜಾತಿ, ಧರ್ಮಭೇದವಿಲ್ಲದ ಎಲ್ಲಾ ಮಕ್ಕಳಿಗೂ ಹಾಕಿಸಬೇಕು. ಎಲ್ಲಿ ಸಮಸ್ಯೆ ಇದೆ ಎಂದು ಅರಿತು ಸಂಬಂಧಿಸಿದ ಮುಖಂಡರು, ಗುರುಗಳ ನೆರವನ್ನು ಪಡೆದು ಮನವರಿಕೆ ಮಾಡಿಕೊಡುವ ಮೂಲಕ ಲಸಿಕೆ ಹಾಕಲು ಮುಂದಾಗಬೇಕೆಂದು ಅಧಿಕಾರಿಗಳಿಗೆ ತಿಳಿಸಿ, ಈ ನಿಟ್ಟಿನಲ್ಲಿ ಆರೋಗ್ಯ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಅಧಿಕಾರಿಗಳ ಪಾತ್ರ ಬಹಳ ಪ್ರಮುಖವಾಗಿದ್ದು ಆಶಾ, ಅಂಗನವಾಡಿ ಕಾರ್ಯಕರ್ತೆಯರ ಸೇವೆಯನ್ನು ಸರಿಯಾಗಿ ಬಳಕೆ ಮಾಡಿಕೊಳ್ಳಲು ತಿಳಿಸಿದರು.

ಜಿಲ್ಲೆಯಲ್ಲಿ 710 ಗರ್ಭಿಣಿ ತಾಯಂದಿರು, 2 ವರ್ಷದೊಳಗಿನ 3154, 2.5 ವರ್ಷದೊಳಗಿನ 170 ಮಕ್ಕಳಿಗೆ ಮಿಷನ್ ಇಂದ್ರ ಧನುಷ್ ಲಸಿಕೆಯನ್ನು ಹಾಕಲು ಗುರಿ ಹೊಂದಲಾಗಿದ್ದು, ಇದಕ್ಕಾಗಿ ಪ್ರಾಥಮಿಕ ಆರೋಗ್ಯ ಕೇಂದ್ರ, ತಾಲ್ಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ ತಂಡಗಳು ಹಾಗೂ ಮೊಬೈಲ್ ತಂಡಗಳನ್ನು ರಚಿಸಲಾಗಿದೆ ಎಂದು ಆರ್.ಸಿ. ಹೆಚ್.ಅಧಿಕಾರಿ ಡಾ. ಮೀನಾಕ್ಷಿ ಕೆ.ಎಸ್. ಸಭೆಯಲ್ಲಿ ತಿಳಿಸಿದರು.

ಸಭೆಯಲ್ಲಿ ಜಿ.ಪಂ. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸುರೇಶ್ ಇಟ್ನಾಳ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ನಾಗರಾಜ್ ಹಾಗೂ ವಿವಿಧ ಇಲಾಖೆ ಅಧಿಕಾರಿಗಳು ಆರೋಗ್ಯ ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದರು.

# ಕಲ್ಲೆದೇವರು ಗ್ರಾಮ ಪಂಚಾಯ್ತಿ ಅಧ್ಯಕ್ಷರಾಗಿ ವೀರಣ್ಣ ಹಿರೇಮಠ, ಉಪಾಧ್ಯಕ್ಷರಾಗಿ ಪುಷ್ಪ



ಹಾವೇರಿ, ಜು. 28 - ಬ್ಯಾಡಗಿ ತಾಲ್ಲೂಕಿನ ಕಲ್ಲೆದೇವರು ಗ್ರಾಮ ಪಂಚಾಯತ್ ಅಧ್ಯಕ್ಷರಾಗಿ ವೀರಣ್ಣ ಹಿರೇಮಠ, ಉಪಾಧ್ಯಕ್ಷರಾಗಿ ಶ್ರೀಮತಿ ಪುಷ್ಪ ಹನುಮಂತಪ್ಪ ನೇಕಾರ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಇಂದು ನಡೆದ ಚುನಾವಣೆಯಲ್ಲಿ ಚುನಾಯಿತ 14 ಜನ ಸದಸ್ಯರು ಹಾಜರಿದ್ದರು. ಶಾಸಕ ಬಸವರಾಜ್ ಶಿವಣ್ಣನವರ್, ತಾಲ್ಲೂಕು ಕಾಂಗ್ರೆ ಅಧ್ಯಕ್ಷ ದಾನಪ್ಪ ಚೂರಿ ಮತ್ತು ಇತರರು ಉಪಸ್ಥಿತರಿದ್ದರು.

# ರೈತರಿಗೆ ಕೃಷಿ ಇಲಾಖೆ ಸೇವೆಗಳ ಮಾಹಿತಿ ದೂರವಾಣಿಯಲ್ಲಿ ಲಭ್ಯ

ದಾವಣಗೆರೆ, ಜು.28- ಜಿಲ್ಲೆಯ ರೈತರಿಗೆ ಕೃಷಿ ಇಲಾಖೆಯಲ್ಲಿ ದೊರೆಯುವ ಸೇವೆಗಳು ಹಾಗೂ ಪ್ರಸಕ್ತ ಸಂದರ್ಭದಲ್ಲಿ ಬೆಳೆಗಳ ಸೂಕ್ತ ನಿರ್ವಹಣೆ ಮಾಡುವ ಕುರಿತು ಒಂದು ಲಕ್ಷಕ್ಕೂ ಹೆಚ್ಚು ಜನ ರೈತರಿಗೆ ಕಳೆದ ಎರಡು ದಿವಸಗಳಿಂದ ಸಮೂಹ ದೂರವಾಣಿ ಕರೆ ಮಾಡುವುದರ ಮೂಲಕ ಮಾಹಿತಿಯನ್ನು ನೀಡಲಾಗಿದೆ ಎಂದು ಜಂಟಿ ನಿರ್ದೇಶಕರು ತಿಳಿಸಿದ್ದಾರೆ.

ರೈತರಿಗೆ ಸಕಾಲದಲ್ಲಿ ಮಾಹಿತಿಯನ್ನು ನೀಡುವುದಕ್ಕೆ ಸಮೂಹ ದೂರವಾಣಿ ಕರೆ ಅತ್ಯುತ್ತಮ ಮಾರ್ಗವಾಗಿದೆ.

ದೂರವಾಣಿ ಮೂಲಕ ಮಾಹಿತಿ ಪಡೆಯಲು ಇಚ್ಚಿಸುವ ರೈತ ಬಾಂಧವರು ಸಹಾಯಕ ಕೃಷಿ ನಿರ್ದೇಶಕರಾದ ಶ್ರೀಮತಿ ಮೀನಾಕ್ಷಿ ಜಿ. ಕೇಸರಿ ಮೊ. 8277928938 ಸಂಖ್ಯೆಗೆ ಎಸ್.ಎಂ.ಎಸ್ ಅಥವಾ ವಾಟ್ಸಾಪ್ ಸಂದೇಶ ಕಳುಹಿಸುವುದರ ಮೂಲಕ ತಮ್ಮ ದೂರವಾಣಿ ಸಂಖ್ಯೆಯನ್ನು ನೋಂದಾಯಿಸುವಂತೆ ಅವರು ಕೋರಿದ್ದಾರೆ.

# ತ್ಯಾಜ್ಯ ಘಟಕದ ಮಹಿಳಾ ಕಾರ್ಮಿಕರಿಗೆ 10 ಕೋಟಿ ರೂ. ಬಂಪರ್‌ಲಾಟರಿ

ಮಲಪ್ಪುರಂ, ಜು. 27 - ಕೇರಳದ ಪ್ಲಾಸ್ಟಿಕ್ ತ್ಯಾಜ್ಯ ವಿಂಗಡಣಾ ಘಟಕದ 11 ಮಹಿಳಾ ಕಾರ್ಮಿಕರಿಗೆ ಲಾಟರಿಯಲ್ಲಿ 10 ಕೋಟಿ ರೂ. ಬಹುಮಾನ ದೊರೆತಿದೆ. ಮಹಿಳೆಯರು 250 ರೂ.ಗಳ ಈ ಟಿಕೆಟ್ಟನ್ನು ತಲಾ 25 ರೂ.ಗಳಂತೆ ಹೊಂದಿಸಿ ಖರೀದಿಸಿದ್ದರು.

ಇಲ್ಲಿನ ಪರಪ್ಪನಂಗಡಿ ನಗರ ಪಾಲಿಕೆಯ ಗೋದಾಮಿನಲ್ಲಿ 11 ಮಹಿಳೆಯರು ರಬ್ಬರ್ ಗ್ಲೌಸ್ ಧರಿಸಿ ಸವಕಲಾದ ಹಸಿರು ಕೋಟ್ ಧರಿಸಿ ಪ್ಲಾಸ್ಟಿಕ್ ತ್ಯಾಜ್ಯ ವಿಂಗಡಿಸುತ್ತಿದ್ದರು. ಕೇರಳ ಲಾಟರಿ ಇಲಾಖೆಯ ಮೂಲಕ ಖರೀದಿಸಲಾದ ಲಾಟರಿ ಇವರ ಭಾಗ್ಯದ ಬಾಗಿಲು ತೆರೆದಿದೆ.

ಬುಧವಾರ ಘೋಷಣೆಯಾದ ಲಾಟರಿಯಲ್ಲಿ ಇವರಿಗೆ ಬಹುಮಾನ ದೊರೆತಿದೆ. ಸುದ್ದಿ ತಿಳಿದ ಜನರು ಗುರುವಾರದಂದು ಗೋದಾಮಿಗೆ ಭೇಟಿ ನೀಡಿ ಇವರಿಗೆ ಅಭಿನಂದಿಸಿದ್ದಾರೆ.

ನಾವೆಲ್ಲರೂ ಜೀವನದಲ್ಲಿ ಕಷ್ಟಪಟ್ಟಿದ್ದೆವು. ಈಗ ಬಹುಮಾನದ ಹಣ ನಮ್ಮ ಸಮಸ್ಯೆಗಳನ್ನು ಸ್ವಲ್ಪ ಮಟ್ಟಿಗೆ ಬಗೆಹರಿಸಲಿದೆ ಎಂದು ಲಾಟರಿ ವಿಜೇತರಲ್ಲಿ ಒಬ್ಬರಾದ ರಾಧಾ ಹೇಳಿದ್ದಾರೆ.

ಹರಿತ ಕರ್ಮ ಸೇನ ಎಂಬ ಸಂಘಟನೆ ನಿರ್ವಹಿಸುವ ಘಟಕದಲ್ಲಿ ಈ ಮಹಿಳೆಯರು ಕೆಲಸ ಮಾಡುತ್ತಿದ್ದರು. ಪ್ರತಿ ತಿಂಗಳಿಗೆ ಇವರು 7,500 ರೂ.ಗಳಿಂದ 14 ಸಾವಿರ ರೂ. ಗಳಿಸುತ್ತಿದ್ದರು.

ಈ ಬಗ್ಗೆ ಮಾತನಾಡಿರುವ ಸಂಘಟನೆಯ ಅಧ್ಯಕ್ಷೆ ಶೀಜಾ, ಈ ಮಹಿಳೆಯರಲ್ಲಿ ಹಲವರು ಸಾಲದಲ್ಲಿದ್ದರು. ಹಲವರ ಹೆಣ್ಣು ಮಕ್ಕಳ ಮದುವೆಯಾಗಬೇಕಿತ್ತು. ಇವರೆಲ್ಲರೂ ಜೀವನದಲ್ಲಿ ನೋವುಂಡವರಾಗಿದ್ದಾರೆ ಎಂದಿದ್ದಾರೆ.

ಈ ಮಹಿಳೆಯರು ಒಟ್ಟಿಗೆ ಹಣ ಹೊಂದಿಸಿ ಟಿಕೆಟ್ ಖರೀದಿಸಿದ್ದು ಎರಡನೇ ಬಾರಿ. ಕಳೆದ ವರ್ಷ ಅವರು ಓಣಂ ಹಬ್ಬದ ಸಮಯದಲ್ಲಿ ಇದೇ ರೀತಿ ಟಿಕೆಟ್ ಖರೀದಿಸಿದ್ದರು. ಆಗಲೂ ಅವರಿಗೆ 7,500 ರೂ.ಗಳ ಬಹುಮಾನ ದೊರೆತಿತ್ತು. ಆಗ ಹಣವನ್ನು ಸಮನಾಗಿ ಹಂಚಿಕೊಂಡಿದ್ದೆವು ಎಂದು ರಾಧಾ ತಿಳಿಸಿದ್ದಾರೆ.

## ಮುಸ್ಲಿಮರ ವಿರುದ್ಧ ಹಿಂಸಾಚಾರ : ವಿಚಾರಣೆಗೆ ಕೋರ್ಟ್ ಸಮ್ಮತಿ

ನವದೆಹಲಿ, ಜು. 28 - ಮುಸ್ಲಿಮರ ವಿರುದ್ಧ ಗೋ ರಕ್ಷಕರು ನಡೆಸುತ್ತಿರುವ ಹಿಂಸಾಚಾರ ತಡೆಯುವಂತೆ ದಾಖಲಿಸಿರುವ ಅರ್ಜಿಯ ವಿಚಾರಣೆಗೆ ಸುಪ್ರೀಂ ಕೋರ್ಟ್ ಸಮ್ಮತಿಸಿದೆ.

ನ್ಯಾಯಮೂರ್ತಿಗಳಾದ ಬಿ.ಆರ್. ಗವಾಯಿ ಹಾಗೂ ಜೆ.ಬಿ. ಪರ್ಡಿವಾಲ ಅವರನ್ನು ಒಳಗೊಂಡ ಪೀಠ ವಿಚಾರಣೆ ನಡೆಸಿದ್ದು, ಈ ಬಗ್ಗೆ ಮಹಾರಾಷ್ಟ್ರ, ಒಡಿಶಾ, ರಾಜಸ್ಥಾನ, ಬಿಹಾರ, ಮಧ್ಯ ಪ್ರದೇಶ ಹಾಗೂ ಹರಿಯಾಣಗಳ ಡಿ.ಜಿ.ಪಿ.ಗಳಿಗೆ ನೋಟಿಸ್ ಕಳಿಸಿದೆ.

# ಜಿಲ್ಲಾಧಿಕಾರಿ ನ್ಯಾಯಾಲಯದಲ್ಲಿ ಕುಸಿದು ಬಿದ್ದ ವೃದ್ಧೆ: ಪ್ರಥಮ ಚಿಕಿತ್ಸೆ ನೀಡಿದ ಜಿಲ್ಲಾಧಿಕಾರಿ



ದಾವಣಗೆರೆ, ಜು.28- ಜಿಲ್ಲಾಧಿಕಾರಿಗಳ ನ್ಯಾಯಾಲಯದ ಕಲಾಪದ ವೇಳೆ ಕುಸಿದು ಬಿದ್ದ ವೃದ್ಧೆಗೆ ಜಿಲ್ಲಾಧಿಕಾರಿಗಳೇ ಪರೀಕ್ಷಿಸಿ ಸೂಕ್ತ ಚಿಕಿತ್ಸೆ ನೀಡಿದ ಘಟನೆ ಶುಕ್ರವಾರ ನಡೆಯಿತು.

ಜಿಲ್ಲಾಧಿಕಾರಿಗಳ ಕಚೇರಿ ಯಲ್ಲಿ ಹಿರಿಯ ನಾಗರಿಕರ ಕುಂದು ಕೊರತೆಗಳಿಗೆ ಸಂಬಂಧಿಸಿ ದ ನ್ಯಾಯಾಲಯದ ಕಲಾಪದಲ್ಲಿ ಜಿಲ್ಲಾಧಿಕಾರಿ ಡಾ ಎಂ.ವಿ.ವೆಂಕಟೇಶ್ ಭಾಗವಹಿಸಿದ್ದರು. ಹಾವೇರಿಯವರಾದ ಮುರಿಗೆಮ್ಮ(73) ಪ್ರಕರಣದಲ್ಲಿ ಭಾಗವಹಿಸಲು ಕಕ್ಷಿದಾರರಾಗಿ ಆಗಮಿಸಿದ್ದರು.

ಕಲಾಪ ನಡೆಯುತ್ತಿದ್ದ ವೇಳೆ ಮುರಿಗೆಮ್ಮ ಅಸ್ವಸ್ಥರಾಗಿ ಕೆಳಗೆ ಉರುಳಿ ಪ್ರಜ್ಞೆ ತಪ್ಪಿದರು. ನ್ಯಾಯಾಧೀಶರ ಸ್ಥಾನದಲ್ಲಿದ್ದ ವೈದ್ಯರೂ ಆಗಿರುವ ಜಿಲ್ಲಾಧಿಕಾರಿ ಡಾ.ವೆಂಕಟೇಶ್ ಎಂ.ವಿ. ಅವರು ತಕ್ಷಣವೇ ಮಹಿಳೆಯ ನಾಡಿ ಪರೀಕ್ಷೆ ಮಾಡಿ, ಪ್ರಥಮ ಚಿಕಿತ್ಸೆ ಮೂಲಕ ಮಹಿಳೆಯನ್ನು ಎಚ್ಚರಗೊಳಿಸಿದರು. ವೃದ್ಧೆ ಕಡಿಮೆ ರಕ್ತದೊತ್ತಡ, ಮಧುಮೇಹದಿಂದ ಬಳಲುತ್ತಿದ್ದರು ಎನ್ನಲಾಗಿದೆ.

## ನಗರದಲ್ಲಿ ಇಂದು ಸತ್ಸಂಗ



ಶ್ರೀ ರವಿಶಂಕರ ಗುರೂಜಿಯವರ ಆರ್ಟ್ ಆಫ್ ಲಿವಿಂಗ್ ಶಿಕ್ಷಕರಿಂದ ಸದ್ಯೋಜಾತ ಮಠದಲ್ಲಿ ಇಂದು ಸಂಜೆ 6 ಗಂಟೆಗೆ ಸತ್ಸಂಗ ಕಾರ್ಯಕ್ರಮ ನಡೆಯಲಿದೆ.


|| ಶ್ರೀ ಆಂಜನೇಯ ಸ್ವಾಮಿ ಪ್ರಸನ್ನ || || ಶ್ರೀ ಉಚ್ಚಂಗೆಮ್ಮ ದೇವಿ ಪ್ರಸನ್ನ ||

ಕೈಲಾಸ ಸಮಾರಾಧನೆ ಆಹ್ವಾನ ಪತ್ರಿಕೆ




ದಾವಣಗೆರೆ ಸಿಟಿ, ಗಾಂಧಿನಗರ, 5ನೇ ಕ್ರಾಸ್ ವಾಸಿಯಾದ
ದಿ. ಶ್ರೀ ಶಾಮನೂರು ಮೈಲಪ್ಪನವರು
(ನಿವೃತ್ತರು ಆದಾಯ ತೆರಿಗೆ ಇಲಾಖೆ)
ಪುತ್ರರಾದ ಶ್ರೀ ಶಾಮನೂರು ಮಂಜುನಾಥ ಮತ್ತು ಶಾಮನೂರು ಪ್ರಶಾಂತ ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ : 17.07.2023ನೇ ಸೋಮವಾರ ಸಂಜೆ 6.45ಕ್ಕೆ ನಮ್ಮ ಪೂಜ್ಯ ತಾಯಿಯವರಾದ
ಶ್ರೀಮತಿ ಶಾಮನೂರು ಹಾಲಮ್ಮನವರು
ಇವರು ಶಿವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
ಕೈಲಾಸ ಸಮಾರಾಧನೆಯನ್ನು
ದಿನಾಂಕ : 29.07.2023ನೇ ಶನಿವಾರ ಬೆಳಿಗ್ಗೆ 10.30ರಿಂದ 12ರವರೆಗೆ ಮೃತರ ಸ್ವಗೃಹ, 5ನೇ ಕ್ರಾಸ್, ಗಾಂಧಿನಗರ, ದಾವಣಗೆರೆ ಇಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುತ್ತಾರೆ. ತಾವುಗಳು ಸಕಾಲಕ್ಕೆ ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.
ದುಃಖತಪ್ತ ಕುಟುಂಬ ವರ್ಗ : ಮಕ್ಕಳು, ಮೊಮ್ಮಕ್ಕಳು, ಸಹೋದರರು, ಸಹೋದರಿಯರು, ಅಳಿಯಂದಿರು, ಸೊಸೆಯಂದಿರು, ಮತ್ತು ಶಾಮನೂರು ವಂಶಸ್ಥರ ಹಾಗೂ ಬಂಧು-ಮಿತ್ರರು.
ಮೊ : 89700 89835, 96113 09260
ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ, ಆಗಮಿಸಲು ಕೋರಿದೆ.



|| ಶ್ರೀ ವಿಶ್ವಬಂಧು ಮರುಳಸಿದ್ಧ ಪ್ರಸನ್ನ ||

ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ



ದಾವಣಗೆರೆ ತಾಲ್ಲೂಕು, ಆನೆಕೊಂಡ ಗ್ರಾಮದ
ಶ್ರೀ ಎ.ಆರ್. ಮುರಿಗೇಂದ್ರಪ್ಪ ಮತ್ತು ಸಹೋದರರು, ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ 21.07.2023ನೇ ಶುಕ್ರವಾರ ಬೆಳಿಗ್ಗೆ 07.30 ಗಂಟೆಗೆ
ದಾವಣಗೆರೆ ಆಂಜನೇಯ ಬಡಾವಣೆ ವಾಸಿ ನಮ್ಮ ಸಹೋದರನಾದ
ಲಯನ್ ಶ್ರೀ ಎ. ಆರ್. ಉಜ್ಜನಪ್ಪನವರು ನಿವೃತ್ತ ಉಪ ತಹಶೀಲ್ದಾರ್
ಇವರು ಲಿಂಗೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
ಕೈಲಾಸ ಶಿವಗಣಾರಾಧನೆ ಹಾಗೂ ಶ್ರದ್ಧಾಂಜಲಿ ಸಮಾರಂಭವನ್ನು
ಪರಮಪೂಜ್ಯ ಶ್ರೀ ಶ್ರೀ ಶ್ರೀ ಡಾ|| ಪಂಡಿತರಾಧ್ಯ ಶಿವಾಚಾರ್ಯ ಸ್ವಾಮಿಗಳು
ಪಟ್ಟಾಧ್ಯಕ್ಷರು, ತರಳಬಾಳು ಜಗದ್ಗುರು ಶಾಖಾಮಠ, ಸಾಣೇಹಳ್ಳಿ ಇವರ ಸಾನ್ನಿಧ್ಯದಲ್ಲಿ
ದಿನಾಂಕ 29.07.2023ನೇ ಶನಿವಾರ ಬೆಳಿಗ್ಗೆ 10.30 ಗಂಟೆಗೆ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಭವನ, ರಿಂಗ್ ರೋಡ್ ಸರ್ಕಲ್, ನಿಜಲಿಂಗಪ್ಪ ಬಡಾವಣೆ, ದಾವಣಗೆರೆ ಇಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಸಕಾಲಕ್ಕೆ ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.
ದುಃಖತಪ್ತ ಕುಟುಂಬ ವರ್ಗ :
ಶ್ರೀಮತಿ ನಾಗಮ್ಮ ಎ.ಆರ್. ಉಜ್ಜನಪ್ಪ ಹಾಗೂ ಮಕ್ಕಳು
#532, 2ನೇ ಕ್ರಾಸ್, ಆಂಜನೇಯ ದೇವಸ್ಥಾನ ಪಕ್ಕ, ಆಂಜನೇಯ ಬಡಾವಣೆ, ದಾವಣಗೆರೆ. ಮೊ : 83105 81526, 98860 18530
ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ, ಆಗಮಿಸಲು ಕೋರಿದೆ.



ಸವಿನೆನಪು



ದಿ|| ಕಿರಣ್ ಎಂ.ಐ.
(ಮಾಲೀಕರು, ಕಿರಣ್ ಶಾಮಿಯಾನ ಸಪ್ಲೈಯರ್ಸ್, ದಾವಣಗೆರೆ.)
ಏಕಾಂಗಿಯಾಗಿ ಅಲೆವ ಮನಕೆ ಒಂದೇ ಆಸೆ ಅದು ಜೊತೆಗೊಂದು ಜೀವ ಬೇಕೆಂದು... ಆ ಜೀವ ನಿನಾಗಿ, ನನ್ನ ಉಸಿರಲ್ಲಿ ಉಸಿರಾಗಿ, ಸದಾ ನನ್ನ ಮನಸಲ್ಲಿ ಜೀವಂತವಾಗಿರುವ ನಿಮ್ಮ ಸವಿನೆನಪುಗಳು ಸದಾ ಅಮರ.. ಇಂದಿಗೆ ಆರು ವಸಂತಗಳು ಉರುಳಿದರೂ, ಮನಸೆಂಬ ಸಾಗರದಲ್ಲಿ ಸದಾ ಮಿನುಗುತಿರಲಿ...
ಸದಾ ನಿಮ್ಮ ಚಿರಸ್ಮರಣೆಯಲ್ಲಿರುವ...
ಧರ್ಮ ಪತ್ನಿ : ಶ್ರೀಮತಿ ಸುರೇಖಾ ಕಿರಣ್ ಮಲ್ಲಿಗವಾಡ್
ತಾಯಿ : ಶ್ರೀಮತಿ ನಿರ್ಮಲ ಮಲ್ಲಿಗವಾಡ್
ಮಗ : ಚಿ|| ಭುವನ್ ಕೆ. ಮಲ್ಲಿಗವಾಡ್
ಬಂಧುಗಳು, ಮಿತ್ರರು ಹಾಗೂ ಸಿಬ್ಬಂದಿ ವರ್ಗ,
ಕಿರಣ್ ಶಾಮಿಯಾನ ಸಪ್ಲೈಯರ್ಸ್, ದಾವಣಗೆರೆ. 98440 90081


## ಜಂಗಮತುಂಬಿಗೆರೆ : ನಾಳೆ ಆರೋಗ್ಯ ತಪಾಸಣಾ ಶಿಬಿರ

ಹರಪನಹಳ್ಳಿ,ಜು. 28- ಹೃದಯ, ರಕ್ತದೊತ್ತಡ, ಮಧುಮೇಹ, ಕೀಲು-ಮೂಳೆ, ಸ್ತ್ರೀರೋಗ ಸಮಸ್ಯೆಗಳು ಸೇರಿದಂತೆ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಹರಪನಹಳ್ಳಿ ತಾಲ್ಲೂಕು ಜಂಗಮತುಂಬಿಗೆರೆಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ಆವರಣದಲ್ಲಿ ನಾಡಿದ್ದು ದಿನಾಂಕ 30ರ ಭಾನುವಾರ ಬೆಳಿಗ್ಗೆ 9.30 ರಿಂದ ಮಧ್ಯಾಹ್ನ 3ರವರೆಗೆ ನಡೆಸಲಾಗುವುದು. ದಾವಣಗೆರೆಯ ಆರೈಕೆ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಮತ್ತು ಪ್ರೀತಿ ಆರೈಕೆ ಟ್ರಸ್ಟ್ ಇವರ ಜಂಟಿ ಆಶ್ರಯದಲ್ಲಿ ನಡೆಯುವ ಶಿಬಿರದ ನೇತೃತ್ವವನ್ನು ಹಿರಿಯ ವೈದ್ಯ ಡಾ. ಟಿ.ಜಿ. ರವಿಕುಮಾರ್ ವಹಿಸಲಿದ್ದಾರೆ. ದಂತ ವೈದ್ಯ ಡಾ. ಹಾಲಸ್ವಾಮಿ ಉಪಸ್ಥಿತರಿರುವರು. ವಿವರಕ್ಕೆ ಸಂಪರ್ಕಿಸಿ : 91644 65550.


Bapuji Educational Association (Regd.),
BAPUJI POLYTECHNIC
SHABANUR, DAVANGERE (Govt. Aided)
(Approved By AICTE,New Delhi & Affiliated to BTE, Bangalore)
FACULTY REQUIRED
APPLICATION FOR THE POST OF
LECTURER IN COMPUTER SCIENCE AND ENGG. DEPARTMENT
QUALIFICATION:
BE/B.TECH/M.TECH IN CS / IS
CONTACT:
9880060880, 8310020543
APPLY WITH IN 7 DAYS AT
Email Id:
bpt335@gmail.com / bptdvg335@gmail.com



ಜನ್ಮ ದಿನದ ಶುಭಾಶಯಗಳು




ದಿನಾಂಕ 29.07.2023 ರಂದು ತಮ್ಮ ಹುಟ್ಟು ಹಬ್ಬದ ಸಂಭ್ರಮದಲ್ಲಿರುವ
ವೀರಶೈವ ಲಿಂಗಾಯತ ಸಮಾಜದ ಮುಖಂಡರಾದ
ದೇವರಮನೆ ಶಿವರಾಜ್
ಅವರಿಗೆ 45ನೇ ವರ್ಷದ ಹುಟ್ಟು ಹಬ್ಬದ
ಹಾರ್ದಿಕ ಶುಭಾಶಯಗಳು.
ಶ್ರೀ ದೇವರಮನೆ ಶಿವಕುಮಾರ್ ಸ್ನೇಹ ಬಳಗ



ನಮ್ಮ ಯಶಸ್ಸಿನ ಪಯಣದತ್ತ
Since : 1998
ಕನಸು ನನಸಾಗಿಸಲು ಸದಾ ನಿಮ್ಮೊಂದಿಗೆ
Sahyadri Chits Private Limited
ಸಹ್ಯಾದ್ರಿ ಚಿಟ್ಸ್ ಪ್ರೈವೇಟ್ ಲಿಮಿಟೆಡ್
over 25 years EXPERIENCE
Grand Opening!
ದಾವಣಗೆರೆಯಲ್ಲಿ ನೂತನ ಶಾಖೆಯ
ಪ್ರಾರಂಭೋತ್ಸವ




✤ ದಿನಾಂಕ :~ 30-07-2023ನೇ ಭಾನುವಾರ
✤ ಸಮಯ :~ ಬೆಳಿಗ್ಗೆ 10-30 ರಿಂದ
✤ ಸ್ಥಳ :~ ಸಹ್ಯಾದ್ರಿ ಚಿಟ್ಸ್ ಪ್ರೈವೇಟ್ ಲಿಮಿಟೆಡ್
ಮೊದಲನೇ ಮಹಡಿ, ಮಲಬಾರ್ ಟೈರ್ಸ್ ಬಿಲ್ಡಿಂಗ್
ಪಿ. ಬಿ. ರಸ್ತೆ, ದಾವಣಗೆರೆ - 577 002.
Grand Opening Ceremony @ Davanagere

✤ ಅಧ್ಯಕ್ಷತೆ :~
ಶ್ರೀ ಬದರಿನಾಥ್ ಬಿ.ಎಸ್.
ಛೇರ್ಮನ್, ಸಹ್ಯಾದ್ರಿ ಚಿಟ್ಸ್ ಪ್ರೈವೇಟ್ ಲಿಮಿಟೆಡ್. ಶಿವಮೊಗ್ಗ.
✤ ಉದ್ಘಾಟಕರು :~
ಸನ್ಮಾನ್ಯ ಶ್ರೀಯುತ ಜಿ. ಎಂ. ಸಿದ್ದೇಶ್ವರ
ಮಾನ್ಯ ಲೋಕ ಸಭಾ ಸದಸ್ಯರು, ದಾವಣಗೆರೆ ಕ್ಷೇತ್ರ ಹಾಗೂ ಮಾಜಿ ಭಾರೀ ಕೈಗಾರಿಕೆಗಳು ಮತ್ತು ಸಾರ್ವಜನಿಕ ಉದ್ಯಮಗಳ ರಾಜ್ಯ ಸಚಿವರು.
✤ ಪ್ರಾಸ್ಥಾವಿಕ ಚೀಟಿಗಳ ಕರಪತ್ರ ಬಿಡುಗಡೆ :~
ಸನ್ಮಾನ್ಯ ಶ್ರೀಯುತ ಶ್ಯಾಮನೂರು ಮಲ್ಲಿಕಾರ್ಜುನ್
ಮಾನ್ಯ ಶಾಸಕರು, ದಾವಣಗೆರೆ ಉತ್ತರ ಕ್ಷೇತ್ರ ಹಾಗೂ ತೋಟಗಾರಿಕೆ ಮತ್ತು ಕೃಷಿ ಮಾರುಕಟ್ಟೆ ಸಚಿವರು.
✤ ಮುಖ್ಯ ಅತಿಥಿಗಳು :~
ಸನ್ಮಾನ್ಯ ಶ್ರೀಯುತ ಡಿ. ಎಸ್. ಅರುಣ್
ಮಾನ್ಯ ವಿಧಾನ ಪರಿಷತ್ ಸದಸ್ಯರು. ಶಿವಮೊಗ್ಗ ಕ್ಷೇತ್ರ.
ಶ್ರೀಯುತ ಉಮಾಪತಿ ಬಿ.ಸಿ.
ಪಾಲುದಾರರು, ಬಿ.ಎಸ್. ಚನ್ನಬಸಪ್ಪ ಮತ್ತು ಮಕ್ಕಳು. (ಜವಳಿ ವರ್ತಕರು)
ಶ್ರೀಯುತ ಅಜ್ಜಂಪುರ ಶೆಟ್ರು ಶಂಭುಲಿಂಗಪ್ಪ
ಕಾರ್ಯದರ್ಶಿಗಳು, ದಾವಣಗೆರೆ ಜಿಲ್ಲಾ ಛೇಂಬರ್ ಆಫ್ ಕಾಮರ್ಸ್ & ಇಂಡಸ್ಟ್ರೀಸ್, ದಾವಣಗೆರೆ.
✤ ಉಪಸ್ಥಿತಿ :~
ಶ್ರೀಯುತ ರಮೇಶ್ ಭಟ್
ವ್ಯವಸ್ಥಾಪಕ ನಿರ್ದೇಶಕರು, ಸಹ್ಯಾದ್ರಿ ಚಿಟ್ಸ್ ಪ್ರೈವೇಟ್ ಲಿಮಿಟೆಡ್
ಶ್ರೀಯುತ ಶಿವರಾಜ್ ಉಡುಗಣಿ
ದಾವಣಗೆರೆ ಶಾಖಾ ವ್ಯವಸ್ಥಾಪಕರು. ಸಹ್ಯಾದ್ರಿ ಚಿಟ್ಸ್ ಪ್ರೈವೇಟ್ ಲಿಮಿಟೆಡ್

ತಮ್ಮೆಲ್ಲರ ಆಗಮನದ ನಿರೀಕ್ಷೆಯಲ್ಲಿ...
ನಿರ್ದೇಶಕ ಮಂಡಳಿ ಮತ್ತು ಸಿಬ್ಬಂದಿ ವರ್ಗ ಸಹ್ಯಾದ್ರಿ ಚಿಟ್ಸ್ ಪ್ರೈವೇಟ್ ಲಿಮಿಟೆಡ್, ಶಿವಮೊಗ್ಗ & ದಾವಣಗೆರೆ
ಸರ್ವರಿಗೂ ಆದರದ ಸುಸ್ವಾಗತ

Head Office :
B.H. Road, Beside Hotel Royal Orchid, SHIVAMOGGA -577 202.
08182-404044, 405044 9620780203
sahyadrichits@gmail.com
www.sahyadrichits.com Sahyadrichits Private Limited Shimoga

Branch Office :
First Floor, Malabar Tyres Building,
Opp. to Reliance Smart, P.B. Road, Davanagere-577 002.
08192-456647 63611 35201